ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆವ ವಿಜಯುವ ಸಾರ್ವ
ಮೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ-
ವೀವಾದ್ಯ ಶಕ್ತಿಯಿದು,
ಸದಮಲಾಂತಃಕರಣ
ತರುಣ ಪ್ರಭಾತಂ

INDEPENDENCE NUMBER | 18-8-1963 | ಸ್ವಾತಂತ್ರ್ಯ ಅಂಕ


# ನವೋದಿತ ಆಫ್ರಿಕಾ

(ಲೇಖಕ: ಶ್ರೀ. ಕೆ. ವಾಸುದೇವ ಕಿಣಿ, ಬಿ.ಎ., ಎಲ್.ಟಿ.)

ವಿಶ್ವಸಂಸ್ಥೆಯ ಸ್ಥಾಪನೆಯಾದ ಬಳಿಕ ಎರಡು ಶತಕಗಳಲ್ಲಿ ಜಗತ್ತಿನ ರಾಜಕೀಯ ಇತಿಹಾಸದಲ್ಲಿ ಮಹತ್ವದ ಹಲವು ಘಟನೆಗಳು ಸಂಭವಿಸಿವೆ. ಆ ಘಟನೆಗಳು ನಿಧಾನವಾಗಿ ಬೆಳೆದು ಅಗೋಚರವಾದಂತೆ ಕಂಡುಬರುತ್ತಿವೆಯಾದರೂ ಭಾವೀ ಜಗತ್ತನ್ನು ರೂಪಿಸಬಲ್ಲುವಾಗಿವೆ. ಮೊದಲು ಜಗತ್ತು ಎರಡು ಬಣಗಳಾಗಿ ಒಡೆಯಿತು. ಒಂದು ಬಣದಲ್ಲಿ ಕೊಮ್ಯುನಿಸ್ಟ್ ರಷ್ಯವು; ಎರಡನೆಯ ಬಣದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು. ಈ ರಾಷ್ಟ್ರಗಳ ನಾಯಕತ್ವವನ್ನು ಅಮೇರಿಕವು ವಹಿಸಿದೆ. ಆಗ್ನೇಯ ಏಷ್ಯದಲ್ಲಿ ಮಧ್ಯಪೂರ್ವದಲ್ಲಿ ಹಲವು ರಾಜಕೀಯ ಕ್ರಾಂತಿಗಳಾದವು. ಹಲವು ರಾಜ್ಯಗಳು ಪರದಾಸ್ಯದಿಂದ ವಿಮುಕ್ತವಾಗಿ ಸ್ವತಂತ್ರವಾದವು.

ಇತ್ತೀಚೆಗೆ ಮೂರನೆಯ ಬಣದ ಜನನವು ಕಾಣುತ್ತಿದೆ. ಯುರೋಪು ಖಂಡದಲ್ಲಿ ಅಮೇರಿಕಕ್ಕೂ ರಷ್ಯಕ್ಕೂ ನಡುವೆ ಸಾಮಾನ್ಯ ಮಾರುಕಟ್ಟೆಯ ರಾಷ್ಟ್ರಗಳು ಒಂದು ಪ್ರಬಲ ಪಾಳ್ಯವನ್ನು ಕಟ್ಟುತ್ತವೆ. ಯುರೋಪಿನ ರಾಜಕೀಯದಲ್ಲಿಯೂ ಆರ್ಥಿಕಾಭಿವೃದ್ಧಿಯಲ್ಲಿಯೂ ಪರರು ಭಾಗವಹಿಸದಂತೆ ಈ ಮೂರನೆಯ ಬಣದ ಉದ್ದೇಶವಾಗಿದೆ. ಈ ಒಕ್ಕೂಟದಲ್ಲಿ ಫ್ರಾನ್ಸು, ಪಶ್ಚಿಮ ಜರ್ಮನಿ, ಲಕ್ಸೆಂಬರ್ಗ್, ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಇಟಲಿ ಕೂಡಿವೆ. ಬ್ರಿಟನನ್ನು ಹೊರಗಿಡಲು ಫ್ರಾನ್ಸು ಯತ್ನಿಸುತ್ತಿದೆ. ಮಧ್ಯ ಪ್ರಾಚ್ಯದಲ್ಲಿ ಅರಬರ ಒಂದು ಮಹಾ ಮಂಡಲವು ಈಜಿಪ್ಟಿನ ನಾಯಕತ್ವದಲ್ಲಿ ರೂಪುಗೊಳ್ಳಲು ಯತ್ನಿಸುತ್ತಿದೆ. ಆಗ್ನೇಯ ಏಷ್ಯದಲ್ಲಿ ಮಲಿಯೇಷ್ಯಾ ಒಕ್ಕೂಟಕ್ಕೆ ಮಾತುಕತೆಗಳು ಸಾಗುತ್ತಿದೆ. ಈ ಒಕ್ಕೂಟದಲ್ಲಿ ಮಲಯಾ, ಸಿಂಗಾಪುರ, ಸಾರವಕ್, ಬ್ರುನೀ, ಉತ್ತರ ಬೊರ್ನಿಯೊ ಸೇರಲಿರುವವು. ಇದರ ನಾಯಕತ್ವವನ್ನು ಮಲಯದ ಪ್ರಧಾನಿ ಅಬ್ದುಲ್ ರಹಮಾನರು ವಹಿಸಿಕೊಂಡಿರುವರು.

ಕಳೆದ ಎರಡು ವರ್ಷಗಳಿಂದ ಆಫ್ರಿಕಾ ಖಂಡದಲ್ಲಿಯೂ ಒಂದು ರಾಜಕೀಯ ಐಕ್ಯರಂಗವನ್ನು ರಚಿಸಬೇಕೆಂಬ ಭಾವನೆಯು ಕಾರ್ಯಗತನಾಗುತ್ತಿದೆ. ಕತ್ತಲೆಕವಿದ ಖಂಡವೆಂದು ಹೆಸರು ಪಡೆದ ಆಫ್ರಿಕದಲ್ಲಿ ಸ್ವಾತಂತ್ರದ ಗಾಳಿ ಬೀಸಹತ್ತಿದೆ. ಸ್ವಾತಂತ್ರ್ಯದೊಡನೆ ಐಕ್ಯ ಸಾಧನೆಯ ಬೆಳಕು ಬೀಳತೊಡಗಿದೆ. ಆಫ್ರಿಕದ ಒಂದೊಂದೇ ನಾಡು ವಿದೇಶಿಯರ ದಾಸ್ಯದಿಂದ ಮುಕ್ತವಾಗತೊಡಗಿದೆ. ಲೈಬೀರಿಯಾ, ನ್ಯಾಜೀರಿಯಾ, ಘಾನಾ, ಆಲ್ಜೀರಿಯಾ, ಟ್ಯುನೀಸಿಯಾ, ಮೊರಕ್ಕೊ, ಸ್ವತಂತ್ರ ಜೀವನವನ್ನು ಪಡೆದು ಪ್ರಗತಿಪಥದಲ್ಲಿ ಸಾಗುತ್ತಿವೆ. ಕಳೆದ ವರ್ಷ ಉಗಾಂಡಾ ರಾಜ್ಯವು ಬ್ರಿಟಿಷರ ಸಾಮ್ರಾಜ್ಯದಿಂದ ಹೊರಬಂದಿತು. ಕೆನಿಯಾ ರಾಜ್ಯವು ಸಧ್ಯದಲ್ಲಿಯೇ ಸ್ವತಂತ್ರ ಪಡೆಯುವುದು.

ಆಫ್ರಿಕಾ ಖಂಡದಲ್ಲಿ ಆಫ್ರಿಕನ ಜನಾಂಗದವರು ಅಧಿಕ ಸಂಖ್ಯೆಯಲ್ಲಿ ನಿವಾಸ ಮಾಡಿರುವರು. ಏಷ್ಯನರು ಎರಡನೆ ದೊಡ್ಡ ಗುಂಪಿನವರು ಮೂರನೆಯ ಜನಾಂಗದವರು ಯುರೋಪಿನ ಬಿಳೀ ಗುಂಪಿನವರಾಗಿರುವರು. ಆಫ್ರಿಕನರು ಕಪ್ಪುವರ್ಣದವರಾಗಿರುವರು. ಅವರಲ್ಲಿ ಸಾವಿರಾರು ಪಂಗಡಗಳಿವೆ. ಅವರು ನೂರಾರು ಭಾಷೆಗಳನ್ನಾಡುತ್ತಾರೆ. ಅವರಲ್ಲಿ ಹಲವು ಭಿನ್ನಭಿನ್ನ ಆಚಾರ ಸಂಪ್ರದಾಯಗಳು ರೂಢಿಯಲ್ಲಿವೆ. ಇಲ್ಲಿಯ ಜನರು ಹೆಚ್ಚಾಗಿ ತಮ್ಮ ಪೂರ್ವಿಕರ ಧರ್ಮವನ್ನೇ ಅವಲಂಬಿಸಿ ಇರುವರು. ಕೆಲವರು ಮತಾಂತರ ಹೊಂದಿ ಕ್ರೈಸ್ತ ಧರ್ಮವನ್ನೂ ಮುಸಲ್ಮಾನ ಧರ್ಮವನ್ನೂ ಸ್ವೀಕರಿಸಿರುವರು. ಇವರಲ್ಲಿ ನಾಗರಿಕ ಜೀವನವು ನಿಧಾನವಾಗಿ ಪ್ರವೇಶಿಸುತ್ತದೆ.

ಆಫ್ರಿಕದ ಜನಾಂಗದವರಲ್ಲಿ ಕಳೆದ ಐವತ್ತು ವರ್ಷಗಳಿಂದ ವರ್ಣದ್ವೇಷವು ಕಠಿಣವಾಗಿ ಬೆಳೆಯುತ್ತಿದೆ. ದಕ್ಷಿಣ ಆಫ್ರಿಕದ ಒಕ್ಕೂಟ ಸರಕಾರದವರು ಕರಿಜನರ ಮೇಲೆ ತಮ್ಮ ದಬ್ಬಾಳಿಕೆಯನ್ನು ನಡೆಸಿ ನೂರಾರು ಅತ್ಯಾಚಾರಗಳಿಂದ ಹಿಂಸೆಗೊಳಿಸುತ್ತಾರೆ. ದಕ್ಷಿಣ ಆಫ್ರಿಕದ ಒಕ್ಕೂಟದ ಜನರಲ್ ಸ್ಮಟ್ಸ್, ಮಾಲನ್, ಎಂಬ ನಾಯಕರ ಕಾಲದಲ್ಲಿ ಅದು ಜನನತಾಳಿ ಬೆಳೆದು ಬಂದಿತು. ಈಗಿನ ನಾಯಕರಾದ ಫೆರ್‌ವರ್ಡ್‌ರ ಕಾಲದಲ್ಲಿ ಅದು ಭೀಕರ ಅಮಾನುಷ ರೂಪವನ್ನು ತಾಳಿದೆ. ಎಚ್ಚೆತ್ತ ಆಫ್ರಿಕದ ನಿವಾಸಿಕರು ಇದನ್ನು ಎದುರಿಸಲು ತಮ್ಮ ತಮ್ಮಲ್ಲಿ ಐಕ್ಯತೆ ಸಾಧಿಸಲು ಪ್ರಯತ್ನ ಮಾಡುತ್ತಿರುವರು. ಇವರ ಚಳವಳವು ಉಗ್ರರೂಪ ತಾಳಲೂ ಬಹುದಾಗಿದೆ. ಈ ವರ್ಣದ್ವೇಷದ ಸಮಸ್ಯೆಯೊಡನೆ ಆಫ್ರಿಕದ ಜನರೊಳಗೆ ಹಲವು ಸಮಸ್ಯೆಗಳಿವೆ. ಹೊಸತಾಗಿ ಜನ್ಮತಾಳಿದ ರಾಷ್ಟ್ರಗಳಲ್ಲಿ ರಾಜಕೀಯ ನಾಯಕತ್ವಕ್ಕಾಗಿ ಹಲವು ಸಮಸ್ಯೆಗಳು ಉದ್ಭವವಾಗುತ್ತಿವೆ. ಆಫ್ರಿಕದಲ್ಲೀಗ ಹಲವು ರಾಜಕೀಯ ಪಕ್ಷಗಳು ಜನ್ಮತಾಳಿವೆ. ಈ ಖಂಡದ ಸಮಸ್ಯೆಗಳೊಡನೆ ವಿದೇಶಿಯರ ಕೈವಾಡದ ಸಮಸ್ಯೆಯೂ ತಲೆಯೆತ್ತಿದೆ. ಆಫ್ರಿಕವು ಎಲ್ಲರಿಗೂ ಬೇಕು. ಕೈಗಾರಿಕೆಯ ರಾಷ್ಟ್ರಗಳಿಗೆ ಆಫ್ರಿಕವು ಒಂದು ದೊಡ್ಡ ಮಾರುಕಟ್ಟೆಯಾಗಿದೆ. ಆ ರಾಷ್ಟ್ರಗಳಿಗೆ ವಿಧವಿಧದ ಕಚ್ಚಾ ಸಾಮಾನುಗಳು ಇಲ್ಲಿ ಸಿಕ್ಕುತ್ತವೆ. ಇವರಿಗೆಲ್ಲಾ ಆಫ್ರಿಕದ ವ್ಯಾಪಾರ ಬೇಕಲ್ಲದೆ ಆಫ್ರಿಕದ ಜನರಲ್ಲಿ ಬ್ರಿಟನು, ಫ್ರಾನ್ಸು, ಪೋರ್ಚುಗಲ್, ಸಂಯುಕ್ತ ರಾಷ್ಟ್ರಗಳು, ಪಶ್ಚಿಮ ಜರ್ಮನಿ, ರಷ್ಯಾ, ಮತ್ತು ಚೀನಾ ದೇಶಗಳು ಆಫ್ರಿಕದ ಮಾರುಕಟ್ಟೆಯಲ್ಲಿ ಸ್ಪರ್ಧೆ ನಡೆಸುತ್ತಿವೆ.

ಕಳೆದ ವರ್ಷ ಆಫ್ರಿಕದ ಕೆಲವು ರಾಷ್ಟ್ರಗಳು ತಮ್ಮೊಳಗಿನ ಸಮಸ್ಯೆಗಳನ್ನು ಪರಿಹಾರಗೊಳಿಸುವ ಉಪಾಯಗಳನ್ನು ಕಂಡುಹಿಡಿಯಲು ಆಕ್ರಾ ಎಂಬ ನಗರದಲ್ಲಿ ಒಂದು ಪರಿಷತ್ತನ್ನು ಕರೆದರು. ಆ ಪರಿಷತ್ತಿನಲ್ಲಿ ಅಲ್ಲಿ ಕೂಡಿದ ಪ್ರತಿನಿಧಿಗಳು ಆಫ್ರಿಕದ ಗುರಿಗಳಾವುವೆಂದು ಜಗತ್ತಿಗೆ ತೋರಿಸಿಕೊಟ್ಟರು. ಸ್ವಲ್ಪ ಸಮಯದ ನಂತರ ಆ ಧುರೀಣರು ಮತ್ತು ಕೆಲವು ಹೊಸ ಧುರೀಣರು ಕೆಸಬ್ಲಾಂಕಾ ಎಂಬ ನಗರದಲ್ಲಿ ಸಭೆಸೇರಿದರು. ಈ ಸಭೆಯಲ್ಲಿ ನೂರಾರು ವಿಷಯಗಳು ಚರ್ಚಿಸಲ್ಪಟ್ಟವು. ಇಲ್ಲಿಯ ಕೆಲವು ನಿರ್ಣಯಗಳು ಕೆಲವರಿಗೆ ಸರಿದೋರಲಿಲ್ಲ. ಅವರಲ್ಲಿ ಅನೇಕರು ಬ್ರೆಜೆವಿಲ್ ಎಂಬಲ್ಲಿ ಸಭೆಸೇರಿ ವಿರುದ್ಧ ವಿಷಯಗಳನ್ನು ಸಾರಿದರು. ಇತ್ತೀಚೆಗೆ ಲೈಬೀರಿಯದ ಮನ್ರೋವಿಯಾ ಎಂಬಲ್ಲಿ ಇಪ್ಪತ್ತು ರಾಷ್ಟ್ರಗಳ ಪ್ರತಿನಿಧಿಗಳು ಸೇರಿಕೊಂಡರು. ಈ ಪ್ರತಿನಿಧಿಗಳು ತಮ್ಮ ರಾಷ್ಟ್ರಗಳ ಹಲವು ಸಮಸ್ಯೆಗಳನ್ನು ಮುಂದಿಟ್ಟು, ಆಫ್ರಿಕದಲ್ಲಿ ಹೇಗೆ ಆ ಸಮಸ್ಯೆಗಳು ಅಭಿವೃದ್ಧಿಗೊಳ್ಳುತ್ತವೆಂದೂ ಆ ಸಮಸ್ಯೆಗಳನ್ನು ಬಗೆಹರಿಯುವ ಉಪಾಯಗಳನ್ನು ಪರಿಶೀಲಿಸಿದರು.

ಇತ್ತೀಚೆಗೆ ಎಡಿಸ್ ಆಬಾಬಾದಲ್ಲಿ ಸ್ವತಂತ್ರ ಆಫ್ರಿಕಾ ರಾಷ್ಟ್ರಗಳ ಸೃಂಗಸಭೆಯೊಂದು ಜರಗಿತು. ಇಲ್ಲಿ ನೆರೆದ ರಾಷ್ಟ್ರಗಳೆಲ್ಲಾ ಐಕ್ಯ ಆಫ್ರಿಕದ ಪ್ರಯತ್ನಕ್ಕಾಗಿ ಚರ್ಚೆ ನಡೆಸಿದವು. ಐಕ್ಯ ಆಫ್ರಿಕದ ರಚನೆಯು ಅಲ್ಲಿ

(3ನೇ ಪುಟಕ್ಕೆ ಮುಂದುವರಿದಿದೆ)

# ಧಾರ್ಮಿಕ ರಮಣಿ

(ಲೇಖಕ:—ಎಮ್. ನಾರಾಯಣ, ಮಂಗಳೂರು.)

ಮುದುಮಲ್ಲಿ ಬನ್ನಾಲೆಯ ಗಂಡನ ಮನೆ ಲಂಬುಲಂಬೆಲದ ಬೀಡು. ತಾಯಿಯ ಮನೆ ಕಲ್ಲುಕುಂಜಲದ ಬೀಡು. ಗಂಡನ ಹೆಸರು ಬನ್ನರೆ ಬನ್ನಾರ!

ಮುದುಮಲ್ಲಿ ಬನ್ನಾಲೆಯನ್ನು ಏಳು-ಏಳೂವರೆ ವಯಸ್ಸಿನಲ್ಲಿ—ಕಿವಿಯ ಕುಂಡಲದಲ್ಲಿ—ಕಾಲಿನ ಕಡಗದಲ್ಲಿ—ಬನ್ನರೆ ಬನ್ನಾರನಿಗೆ ಮದುವೆಮಾಡಿ ಕೊಟ್ಟಿತ್ತು.

ಬನ್ನಾಲೆ ಗಂಡನ ಮನೆಯಲ್ಲೇ ಪ್ರಾಯಭರಿತಳಾಗಿ ಪುಷ್ಪಿಣೆಯಾದಳು. ಆ ಮೇಲೆ ತವರಿನವರು ಕರೆಯುವುದಕ್ಕೆ ಬಂದುದೂ ಇಲ್ಲ; ಅವಳಾಗಿ ಹೋದುದೂ ಇಲ್ಲ.

ಒಂದಾನೊಂದು ದಿನ ಬನ್ನಾಲೆ ಬೆಳಿಗ್ಯೆ ಬೇಗನೆ ಎದ್ದಳು. ಅಂಗಳ ಗುಡಿಸಿದಳು. ಪಾತ್ರೆಪರಡಿ ತೊಳೆದಳು. ಹಟ್ಟಿಗೆ ಹೋಗಿ ಹಾಲು ಕರೆದಳು. ಒಳಗೆ ನೀರು ಒಯ್ದಳು. ಗೃಹಕೃತ್ಯದ ಎಲ್ಲಾ ಕೆಲಸಗಳನ್ನು ಮಾಡಿದಳು. ಅಷ್ಟಾಗುವ ವರೆಗೂ ಅತ್ತೆ ಚಾಪೆ ಬಿಟ್ಟು ಎದ್ದಿರಲಿಲ್ಲ. ಬನ್ನಾಲೆ ಅತ್ತೆಯ ಬಳಿಗೆ ಹೋಗಿ —

"ಅತ್ತೇ, ಬೆಳಕು ಮೇಲೇರಿತು; ಏಳಿ. ನನಗೆ ಹಸಿವಾಗುತ್ತದೆ; ಹೊಟ್ಟೆ ಉರಿಯುತ್ತದೆ."— ಎಂದಳು.

ಅದನ್ನು ಕೇಳಿ ಅತ್ತೆ ಹೊರಳಿ ಹಿಮ್ಮುಖ ಮಾಡಿ ಮಲಗಿದಳು. ಬನ್ನಾಲೆ ಪುನಃ ಹೇಳಿದಳು:

"ಒಂದಾವರ್ತಿ, ಎರಡಾವರ್ತಿಯ ಕೆಲಸ ಮಾಡಿದೆನು; ಮೂರಾವರ್ತಿಯ ಕೆಲಸ ಮುಗಿಸಿದೆನು. ನೀವು ಇನ್ನೂ ನಿದ್ದೆ ಬಿಟ್ಟು ಏಳುತ್ತಿಲ್ಲ. ನನಗೆ ಹಸಿವೆಯಾಗುತ್ತೆದೆ; ಹೊಟ್ಟೆ ಉರಿಯುತ್ತೆದೆ, ಅತ್ತೆಮ್ಮನವರೇ!"

ಆಗ ಅತ್ತೆ ಮಲಗಿದ್ದಲ್ಲಿಂದ ನುಡಿದಳು:

"ನನ್ನನ್ನೇಕೆ ಎಬ್ಬಿಸುವೇ? ಮಡಕೆಯ ತಂಗೂಳುಂಟು; ಕುಡಿಕೆಯ ಮೊಸರುಂಟು; ಮರಿಗೆಯ ಉಪ್ಪಿನ ಕಾಯುಂಟು. ಬಡಿಸಿಕೊಂಡು ನೀನಗೆ ಉಣಬಹುದಲ್ಲಾ?"

ಅಷ್ಟು ಕೇಳಿ ಬನ್ನಾಲೆ ಅಡಿಗೆಕೋಣೆಗೆ ಹೋದಳು. ಬಟ್ಟಲಿಗೆ ತಂಗೂಳು ಬಡಿಸಿದಳು. ಮೊಸರು, ಉಪ್ಪಿನಕಾಯಿಗಳನ್ನು ಹಾಕಿಕೊಂಡಳು. ಉಣ್ಣುವುದಕ್ಕೆ ಕೂತಳು.

ಅನಿತರಲ್ಲಿ ಅತ್ತೆ ಸ್ನಾನಗೃಹಕ್ಕೆ ಹೋಗಿ ಮುಖಮಜ್ಜನ ಮಾಡಿದಳು. ನೇರಾಗಿ ಅಡಿಗೆ ಕೋಣೆಯನ್ನು ಪ್ರವೇಶಿಸಿದಳು. ಸೊಸೆ ಉಣ್ಣುವುದಕ್ಕೆ ಕುಳಿತದನ್ನು ಅವಳಿಗೆ ನೋಡಲಾಗಲಿಲ್ಲ. ಕ್ರೋಧ-ಮತ್ಸರಗಳು ಏಕಕಾಲದಲ್ಲಿ ಅವಳನ್ನಾವರಿಸಿತು. ಒಂದು ಕೈಯಲ್ಲಿ ಸೊಸೆಯ ಜುಟ್ಟನ್ನು ಅವುಚಿ, ಮತ್ತೊಂದು ಕೈಯಲ್ಲಿ ಪೊರಕೆಯನ್ನು ಹಿಡಿದು ಕೆಮ್ಮೋರೆಯಿಂದ ದುರುಗುಟ್ಟಿಸುತ್ತ,

"ನೀನು ಬರುವಾಗ ಏಳಡಿ ಭೂಮಿ ತಂದಿರುವೆಯಾ, ರಂ....? ಅಷ್ಟು ನಿನ್ನ ಸೊಕ್ಕೇ! ಎಲ್ಲ ನಿನ್ನ ಖುಷಿಯಾಯಿತಲ್ಲವೇ? ಇನ್ನು ಕೂಡ ಬೆಳಕು ಹರಿದಿಲ್ಲ; ಬೊಳ್ಳರಿ ಮಾನಿಗ (ಒಂದು ಹಕ್ಕಿ) ಸ್ವರಕೊಡಲಿಲ್ಲ; ನಿನಗೆ ಹಸಿವು? ಮುದ್ದು ಕರುಗಳಿಗೆ ಅಕ್ಕಚ್ಚು ಇಟ್ಟೆಯಾ? ಕಿವಿಯ ಕುಂಡಲದಲ್ಲಿ ಕಾಲಿನ ಕಡಗದಲ್ಲಿ ನೀನು ಈ ಮನೆಯ ಹೊಸ್ತಿಲನ್ನು ಬಲದ ಕಾಲೂರಿ ಹೊಗ್ಗಿದೆ. ಹೀಗೆ ಬಂದವಳು ಎಡದ ಕಾಲನ್ನು ಹೊಸ್ತಿಲ ಹೊರಗೆ ಇಡಲಿಲ್ಲ. ಸೂರಣದ ಗಡ್ಡೆಯನ್ನು ವರುಷಕ್ಕೊಮ್ಮೆಯಾದರೂ ಪೆರತಿಡುವುದಕ್ಕುಂಟು; ನಿನಗೆ ಅಷ್ಟು ಕೂಡ ಇಲ್ಲ. ಮನೆಗೆ ಮಾರಿ ಹೊಕ್ಕಿದ ಹಾಗೆ ಹೊಕ್ಕಿದೆ..." ಎನ್ನುತ್ತ ಅವಳಿಗೆ ಪೊರಕೆಯಿಂದ ರಪರಪನೇ ಹೊಡೆದಳು.

ಅತ್ತೆ ಹಾಗೆ ನಿರ್ದಯವಾಗಿ ಒಂದೇ ಸವನೆ ಹೊಡೆಯುತ್ತಿರುವಾಗ ಸೊಸೆ ಆರ್ತಸ್ವರದಿಂದ, —

"ಅತ್ತೇ, ನನ್ನನ್ನು ಹಂಗಿಸಬೇಡಿ! ನನ್ನ ಏಳು ಮಂದಿ ಅಣ್ಣಂದಿರುರಿಗೆ ಏಳ್ವರು ಮಾವಂದಿರುರಿಗೆ ನಾನು ಭಾರವಾಗಲಾರೆನು. ಬಳ್ಳಿಗೊಂದು ಕಾಯಿ, ಕುಟುಂಬಕ್ಕೊಂದು ಹೆಣ್ಣು ನಾನು. ಆದರೆ ಗಂಡನ ಮನೆಯನ್ನು ತೊಲಗಿ ಹೋಗುವುದು ಸತಿಗೆ ಶೋಭೆಯಲ್ಲ. ಅತ್ತೇ, ಇಷ್ಟು ಹೊತ್ತು ತನಕ ನೀವು ಹೊಡೆದದ್ದು ನಾನು ಮಾಡಿದ ಅನ್ಯಾಯಕ್ಕಾಯಿತು; ಇನ್ನು ಮೇಲೆ ಹೊಡೆದರೆ ದಾರಿಯಲ್ಲಿ ಹೋಗುವ ಸರ್ಪವನ್ನು ಕೊಂದ ದೋಷ ಉಂಟು ನಿಮಗೆ!"—ಎನ್ನುತ್ತ ಆಣೆಭಾಷೆ ಹೊರಿಸಿದಳು.

ಅದಕ್ಕೆ ಅತ್ತೆ ಒದರಿದಳು:

"ದಾರಿಯಲ್ಲಿ ಹೋಗುವ ಸರ್ಪವನ್ನು ಕೊಂದ ದೋಷ ತಟ್ಟಿದರೆ ನಾಲ್ಕು ಮಂದಿ ಬ್ರಾಹ್ಮಣರಿಗೆ ಸಮಾರಾಧನೆ ಕೊಟ್ಟು ನಿವಾರಣೆಗೈದೇನು. ಆದರೆ ನಿನ್ನನ್ನು ಬಿಡಲಾರೆ!"—

ಕಾಲಿನಿಂದ ಸೊಸೆಗೆ ನೆಗ್ಗುನೆಗ್ಗಾಗುವಂತೆ ಒದೆದಳು.

"ಅತ್ತೇ, ಇಷ್ಟು ಹೊತ್ತು ನನಗೆ ಹೊಡೆದಿರಿ; ಇನ್ನು ಮೇಲೆ ಹೊಡೆದರೆ ಕಪಿಲೆಯನ್ನು ಕೊಂದ ಪಾಪ ನಿಮಗೆ ತಟ್ಟೀತು!"

"ಆ ಪಾಪವನ್ನು ಕಾಶಿ-ರಾಮೇಶ್ವರಕ್ಕೆ ಹೋಗಿ ಪರಿಹಾರಮಾಡಿಕೊಂಡು ಬಂದೇನು."

ಆ ಮೇಲೆಯೂ ಪೆಟ್ಟುಹಾಕಿದಳು.

ಬನ್ನಾಲೆ ಹೊಡೆತ ತಿಂದು ಹಣ್ಣುಹಣ್ಣಾಗಿ, ಮುಂಗಾಣದೆ, ಅವಿರಳ ಧಾರೆಯಾಗಿ ಕಣ್ಣೀರ್ಗರೆಯುತ್ತ, —

"ಅತ್ತೇ, ನನಗೆ ನಿಮ್ಮ ಪೆಟ್ಟು ತಿನ್ನುವುದಕ್ಕೆ ಸಾಧ್ಯವಿಲ್ಲ. ನನ್ನನ್ನು ಕೊಂದ ಅಪರಾಧ ನಿಮ್ಮ ಮೇಲೆ ಬರುವುದು. ತಾಳಲಾರೆ; ಅಯ್ಯೋ! ದಮ್ಮಯ್ಯ!"—ಎಂದು ಮೊರೆ ಇಟ್ಟಳು.

ಆಗ ಅತ್ತೆಗೆ ಭಯವಾಯಿತು. ಹೊಡೆಯುವುದನ್ನು ನಿಲ್ಲಿಸಿದಳು. ಆದರೆ ಆ ದುಷ್ಟೆ ತಾನು ಕೊಲೆಯ ಆರೋಪಕ್ಕೆ ಸಿಕ್ಕಿ ಬೀಳದ ಹಾಗೆ, ಬಳಿಕ ಮತ್ತೊಂದು ಉಪಾಯವನ್ನು ಸೃಜಿಸಿದಳು.

ಸೊಸೆಯ ತವರಿಗೆ "ಅಂದವಾದ ಭತ್ತವನ್ನು ಭದ್ರವಾದ ಬೈಹುಲ್ಲಿನಿಂದ ಕಟ್ಟಿ, ಅದನ್ನು ಪಲ್ಲಕ್ಕಿಯಲ್ಲಿಟ್ಟು ಕಳುಹಿಸಿದ್ದೇನೆ."—ಎಂಬುದಾಗಿ ಓಲೆಯೊಂದನ್ನು ಬರೆದು ಕೂಡಲೇ ರವಾನಿಸಿದಳು.

ಅದರ ಬೆನ್ನಿಗೇ, ತಮ್ಮ ತಮ್ಮ ಗಂಡನ ಮನೆಯಲ್ಲಿರುವ ತನ್ನ ಇಬ್ಬರು ಪುತ್ರಿಯರಿಗೆ "ದಾರಿ ಪಯಣದಲ್ಲಿ ಪಲ್ಲಕ್ಕಿಯಲ್ಲಿ ಬರುವ ಬನ್ನಾಲೆಯನ್ನು ಸಂಧಿಸಿ, ಅವಳನ್ನು ಉಪಾಯಾಂತರದಿಂದ ಕೊಲ್ಲಬೇಕು."—ಎನ್ನುವ ರಹಸ್ಯವಾದ ಓಲೆಗಳನ್ನು ಕೂಡ ಬರೆದು ಕಳುಹಿಸಿದಳು.

ಅಟ್ಟದ ಮೇಲಿದ್ದ—ಬನ್ನಾಲೆ ಮದುವೆಯಾಗಿ ಕುಳಿತು ಬಂದ—ಪಲ್ಲಕಿಯನ್ನು ಆಳುಗಳಿಂದ ಕೆಳಗಿಳಿಸಿದಳು. ಪಲ್ಲಕಿಯನ್ನು ಸಿಂಗರಿಸಲಾಯಿತು. ಬನ್ನಾಲೆಯನ್ನು ಪಲ್ಲಕಿಯಲ್ಲಿ ಕೂತುಕೊಳ್ಳಿಸಿದಳು. ಬನ್ನಾಲೆಗೆಂದಳು:

"ನಿನ್ನ ಮದುಮಗ—ನನ್ನ ಮಗ—ನು ಕಡೇಕಾರ್ಲ ಕೋಡಿ ಕುಂಬ್ಳೆಗೆ ತೀರ್ವೆಯ ಹಣ ಕಟ್ಟಲಿಕ್ಕೆ ಹೋದವನು ಮರಳುವುದರೊಳಗಾಗಿ ನೀನು ತವರಿಗೆ ಹೋಗಿ ಬರಬೇಕು."

ಬನ್ನಾಲೆ ಪಲ್ಲಕಿಯೊಳಗಿಂದ ಅತ್ತೆಗೆ, —

"ಅತ್ತೇ, ನನಗೊಂದು ಗಿಂಡೆ ನೀರನ್ನು ಕೊಡಿರಿ."—ಎಂದು ಬೇಡಿದಳು.

ಅತ್ತೆ ಒಳಗೆ ಹೋಗಿ ಒಂದು ಗಿಂಡೆ ನೀರು ತಂದುಕೊಟ್ಟಳು.

ಬನ್ನಾಲೆ ಪಲ್ಲಕಿ ಹೊರಗೆ ತನ್ನ ಕಾಲುಗಳನ್ನು ಇಳಿಬಿಟ್ಟು, ಕಾಲಿಗೆ ಗಿಂಡೆಯ ನೀರನ್ನು ಹೊಯ್ದಳು. ಹಾಗೆ ಮಾಡುತ್ತಿರುವಾಗ, —

"ಅತ್ತೇ, ಲಂಬುಲಂಬೆಲದ ಬೀಡಿನ ಮಣ್ಣು ಕಲ್ಲುಕುಂಜಲದ ಬೀಡಿಗೆ ಹೋಗಬಾರದು. ಕಿವಿಯ ಕುಂಡಲದಲ್ಲಿ, ಕಾಲಿನ ಕಡಗದಲ್ಲಿ ಧಾರೆ ಎರೆದು ಕೊಟ್ಟ ನನ್ನನ್ನು ಈ ಮನೆಗೆ ಕರೆದುಕೊಂಡು ಬಂದಿರಿ. ಬಲದ ಕಾಲು

---

ತುಳುಸಂಧಿಯ ಕತೆಗಳು "ಪ್ರಭಾತ"ದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಪ್ರಕಟವಾಗುತ್ತಿವೆ.

"ತುಳುನಾಡು" ವಿಧಿಸಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿಶಿಷ್ಟ ಸಂಸ್ಕೃತಿಯನ್ನು ಈ ಕಥೆಗಳು ಬಯಲಿಗೆ ತಂದಿವೆ. ತುಳುನಾಡಿಗೆ ಜೈನ ಮತವೂ ವೈಷ್ಣವ ಮತವೂ ಬಂದು ಸ್ಥಿರವಾಗುವ ಮೊದಲೂ ಅನಂತರವೂ, ಈ ಜಿಲ್ಲೆಯ ತುಳುವರ ಜೀವನ ಹೇಗಿತ್ತು, ಅವರ ಪದ್ಧತಿಗಳಾವುವು, ಅವರ ಅತಿಥಿ ಸತ್ಕಾರದ ರೀತಿ, ವಿವಾಹಾದಿ ಶುಭಕಾರ್ಯಗಳು, ದೈವಭಕ್ತಿ ಹೇಗಿದ್ದವು, ತುಳುವ ಸ್ತ್ರೀಯರ ಸ್ಥಾನ-ಮಾನಗಳೇನು—ಮುಂತಾದುವೆಲ್ಲವೂ ಈ ಕತೆಗಳಿಂದ ತಿಳಿದುಬರುತ್ತದೆ.

"ಪಾಡ್ದನ"ಗಳೆಂಬ ಜಾನಪದ ಗೀತಗಳಲ್ಲಿ ಅಡಕವಾಗಿರುವ ಈ ಕತೆಗಳನ್ನು, ಶ್ರೀ। ಎಮ್. ನಾರಾಯಣರವರು, ಅಲ್ಲಲ್ಲಿ ಸಂಚರಿಸಿ—ವಯೋವೃದ್ಧ ತುಳು ಮಹಿಳೆಯರಿಂದ ಹಾಡಿಸಿ ಕೇಳಿ ಬರೆದುಕೊಂಡು, ಗದ್ಯರೂಪಕ್ಕಿಳಿಸಿರುವರು. ಇದೊಂದು ಮಹಾ ಯತ್ನವಷ್ಟೇ ಅಲ್ಲ, ಉಪಯುಕ್ತ ಹಾಗೂ ಪ್ರಶಂಸನೀಯ "ಸಂಶೋಧನೆ"ಯೆಂದೇ ಹೇಳಬಹುದು. ಹೀಗೆ ಸಂಗ್ರಹ ಮಾಡಲ್ಪಟ್ಟು ಬರೆದ ಕತೆಗಳಲ್ಲಿ ಈ ಮೊದಲು 52 ಕತೆಗಳು "ಪ್ರಭಾತ"ದಲ್ಲಿ ಪ್ರಕಟವಾಗಿವೆ. 53ನೇ ಕತೆಯಾಗಿ "ಧಾರ್ಮಿಕ ರಮಣಿ"—ಈ ವಿಶೇಷಾಂಕದಲ್ಲಿ ಪ್ರಕಟವಾಗಿದೆ.

ಇನ್ನೂ ಇಂಥ ಹಲವು ಕತೆಗಳು ಇಷ್ಟರೊಳಗೆ ಸಂಗ್ರಹವಾಗಿದ್ದು, ಕ್ರಮಶಃ ಇದೇ ಪತ್ರಿಕೆಯಲ್ಲಿ ವಾರವಾರವೂ ಪ್ರಕಟವಾಗುವುವು.

ತುಳು ಸಾಹಿತ್ಯ ಸಂಗ್ರಹದಲ್ಲಿ ಬಹುಶಃ ಇದುವೇ ದೊಡ್ಡದು.

ಕುಡ್ಪಿ ವಾಸುದೇವ ಶೆಣೈ,
ಸಂಪಾದಕ, ಪ್ರಭಾತ.

---

ಹಾಕಿ ಹೊಗ್ಗಿದೆನು. ಇಂದು ನನಗೆ ಎಡದ ಕಾಲನ್ನು ಹೊರಗಿಟ್ಟು ಹೋಗುವ ಕಾಲ ಬಂತೇ? ಹಾ, ನನ್ನ ದುರ್ಭಾಗ್ಯವೇ!...."—ಎಂದು ಎರಡೂ ಕೈಗಳನ್ನು ಮುಖಕ್ಕೆ ಮುಚ್ಚಿಕೊಂಡು ರೋದಿಸಿದಳು.

ಅದನ್ನು ನೋಡಿ ಅತ್ತೆ ಬೋವಿಗಳಿಗೆ—

"ಪಲ್ಲಕಿ ಹೇರಲಿ; ಪಲ್ಲಕ್ಕಿ ಹೊರಡಲಿ." --ಎಂದು ಆಜ್ಞಾಪಿಸಿದಳು.

ಪಲ್ಲಕ್ಕಿಯನ್ನು ಹೊತ್ತುಕೊಂಡು ಬೋವಿಗಳು ತೆರಳಿದರು.

ಒಂದು ಗುಡ್ಡ, ಒಂದು ಬೈಲು ದಾಟುವಾಗ ಸಾರ್ವಜನಿಕರು ಸರಿದಾಡುವ ರಸ್ತೆ ಬಂತು. ದಾರಿ ಪಯಣದಲ್ಲಿ ದೊಡ್ಡ ಅತ್ತಿಗೆಯ ಮನೆ ಎದುರಿಗೆ ಬನ್ನಾಲೆಯ ಪಲ್ಲಕ್ಕಿ ಸಾಗಿತು. ಅತ್ತಿಗೆ ಧಾವಿಸಿ ಬಂದು ಬೋವಿಗಳಿಗೆ,

"ನನ್ನ ಅತ್ತಿಗೆ ಇರುವ ಪಲ್ಲಕಿಯನ್ನು ಇಳಿಸಿರಿ"—ಎಂದು ಹೇಳಿದಳು.

ಬೋವಿಗಳು ಪಲ್ಲಕಿಯನ್ನು ಇಳಿಸಿದರು. ಅತ್ತಿಗೆ ಪಲ್ಲಕಿಯ ಪರದೆಯನ್ನು ಬದಿಗೆ ಸರಿಸಿ,

"ಅಕ್ಕನವರೇ, ಭಾರಿ ತುರ್ತಿನಿಂದ ಹೊರಟಿದ್ದೀರಲ್ಲೆ! ಎಲ್ಲಿಗೆ? ಏನು ಬಂದಿರಿ? ನಮ್ಮ ಮನೆಗೆ ಬನ್ನಿ"—ಎಂದು ಸಾದರಿಸಿದಳು.

ಬನ್ನಾಲೆ ಅತ್ತಿಗೆಗೆ ಒರೆದಳು:-

"ವೇಳೆಯಾಗುತ್ತದೆ; ಹೊತ್ತು ಮೀರುತ್ತದೆ. ನನ್ನ ಮದುಮಗ—ನಿಮ್ಮ ಅಣ್ಣ—ಕಡೇರಿಕಾರ್ಳ ಕೋಡಿ ಕುಂಬೈಗೆ ಸರಕಾರದ ತೀರ್ವೆ ಕಟ್ಟಲಿಕ್ಕೆ ಹೋಗಿದ್ದಾರೆ. ಅವರು ಹೋದವರು ಬರುವುದರೊಳಗೆ ಮನೆ ಸೇರಬೇಕೆಂದು ಅತ್ತೆಯವರ ಕಟ್ಟಾಜ್ಞೆಯಾಗಿದೆ. ನಾನೀಗ ಕಲ್ಲುಕುಂಜಲದ ಬೀಡಿಗೆ ಹೋಗುತ್ತೇನೆ. ಹಿಂತಿರುಗುವಾಗ ನಿಮ್ಮ ಮನೆಗೆ ಸಂದರ್ಶಿಸುವೆನು."

"ನೀವು ಮನೆಗೆ ಬರುವುದಿಲ್ಲವಾದರೆ, ಆಸರು ಕುಡಿಯಿರಿ; ಇಲ್ಲಿಗೇ ತಂದು ಕೊಡುವೆನು. ಸ್ವಲ್ಪ ತಡೆಯಿರಿ."

ಅತ್ತಿಗೆ ಮನೆಗೆ ಓಡಿದಳು. ಬೆಳ್ಳಿಯ ಗಿಂಡೆಯಲ್ಲಿ ಹಾಲು, ಪಿಂಗಾಣಿಯಲ್ಲಿ ನೀರು ತೆಗೆದುಕೊಂಡು ಹಿಂತಿರುಗಿದಳು. ಎರಡನ್ನೂ ಬನ್ನಾಲೆಗೆ ಚಾಚಿದಳು. ವಿಷಮಿಶ್ರಿತ ಹಾಲು—ನೀರು!

ಬನ್ನಾಲೆ ಬಲಕೈಯಿಂದ ಹಾಲಿನ ಗಿಂಡೆಯನ್ನು ತೆಕ್ಕೊಂಡು, ಹಾಲನ್ನು ಪಲ್ಲಕಿಯ ಹೊರಗೆ—ಬಲಕ್ಕೆ ಚೆಲ್ಲಿದಳು; ಎಡಕೈಯಿಂದ ನೀರಿನ ಪಿಂಗಾಣಿಯನ್ನು ತೆಕ್ಕೊಂಡು, ನೀರನ್ನು ಎಡಕ್ಕೆ ಚೆಲ್ಲಿದಳು.

ಹಾಲು ಬಿದ್ದಲ್ಲಿ ಹಸಿರು ಹುಲ್ಲುಗಳು ಕರಟಿಕೊಂಡಿತ್ತು! ನೀರು ಬಿದ್ದಲ್ಲಿ ಮಣ್ಣು ಸುಟ್ಟುಕೊಂಡಿತು.

ಹತಾಶಳಾದ ಅತ್ತಿಗೆ, "ಅಕ್ಕಾ, ಹಾಲು-ನೀರನ್ನು ಚೆಲ್ಲಿಕೊಟ್ಟಿರಿ! ಆಸರು ತಗ್ಗಿಸಲಿಲ್ಲ; ಬೆಸರು ಕಳೆಯಲಿಲ್ಲ"—ಎಂದು ಬಡಬಡಿಸಿದಳು.

ಬನ್ನಾಲೆ ಹೇಳಿದಳು:

"ಲಂಬುಲಂಬೆಲದ ಬೀಡಿನಿಂದ ಹೊರಟು ಬರುವಾಗ ನಾನು ಹೊಟ್ಟೆ ತುಂಬಲಷ್ಟು ಕುಡಿದುಬಂದೆನು. ನೀವು ಕೊಟ್ಟದ್ದನ್ನು ನಾನು ಕೈಯಾರೆ ಸ್ವೀಕರಿಸಿದೆಯಷ್ಟೇ? ನಾನಿನ್ನು ಹೋಗುತ್ತೇನೆ."

ಬೋವಿಗಳಿಗೆ "ಪಲ್ಲಕ್ಕಿ ಹೊತ್ತುಕೊಳ್ಳಿರಿ; ಪಲ್ಲಕ್ಕಿ ಸಾಗಲಿ" ಎಂದು ನುಡಿಕೊಟ್ಟಳು. ಪಲ್ಲಕ್ಕಿ ಮುಂದಕ್ಕೆ ಹೊರಟಿತು.

ಪಲ್ಲಕ್ಕಿ ಹೆದ್ದಾರಿ ಬಿಟ್ಟು, ಜಾನುವಾರು ಹೋಗುವ ಹುಲ್ಲುಗಾವಲ ಪಕ್ಕದಲ್ಲಿ ತೆರಳಿತು. ಕೊಂಚ ದೂರಬರುವಾಗ, ಚಿಕ್ಕ ಅತ್ತಿಗೆಯ ಮನೆ ಕಾಣಿಸಿತು. ಚಿಕ್ಕ ಅತ್ತಿಗೆ ಕನ್ನಡಿ ಹಾವಿನ ನೊರೆ ಹಾಕಿ ಅಪ್ಪ ತಯಾರಿಸಿದ್ದಳು; ಹಾಲಿಗೆ ಬಿಳಿ ಪಾಷಣ ಬೆರಸಿಟ್ಟಿದ್ದಳು. ಅವುಗಳನ್ನು ಹಿಡಿದುಕೊಂಡು ಬನ್ನಾಲೆಯ ಪಲ್ಲಕ್ಕಿ ಬರುವಾಗ "ಅಕ್ಕಾ! ಅಕ್ಕಾ!"—ಎಂದು ಸ್ವಾಗತಿಸುತ್ತ ಇದಿರ್ಗೊಂಡಳು. ಬನ್ನಾಲೆಗೆ ತಿನ್ನುವುದಕ್ಕೆ ಅಪ್ಪವನ್ನೂ, ಕುಡಿಯುವುದಕ್ಕೆ ಹಾಲನ್ನೂ ಕೊಟ್ಟಳು.

ಬನ್ನಾಲೆ ಅಪ್ಪವನ್ನು ತೆಕ್ಕೊಂಡು ಪಲ್ಲಕಿಯಲ್ಲಿಟ್ಟಳು. ಹಾಲಿನ ಗಿಂಡೆಯನ್ನು ತೆಕ್ಕೊಂಡು, ಹಾಲನ್ನು ತನ್ನ ಕಾಲಿನ ಕಾಲುಂಗುರಕ್ಕೆ ಹೊಯ್ದಳು. ತಕ್ಷಣ ಕಾಲುಂಗರ ಕಟಕಟನೇ ಒಡೆಯಿತು! ಬನ್ನಾಲೆ ಸಣ್ಣ ಅತ್ತಿಗೆಗೆ:—

"ಬಹು ಒಳ್ಳೆಯ ಮುದ್ದು ಮೋಹದ ಅತ್ತಿಗೆ ನೀವು!"—ಎಂದು ವ್ಯಂಗ್ಯವಾಗಿ ನಗೆಯಾಡಿದಳು.

ಬೋವಿಗಳಿಗೆ ಪಲ್ಲಕ್ಕಿ ಹೊರಡಲೆಂದಳು. ಪಲ್ಲಕ್ಕಿ ಮುಂದೊತ್ತಿತು.

ಮದುಮಲ್ತಿ ಬನ್ನಾಲೆ ಇದೀಗ ಹೋಗುತ್ತ ಗಂಭೀರ ಭಾವಪರವಶಳಾದಳು. ಮನೆ ದೂರವಿರಬಹುದು; ಮನಸ್ಸು ಮಾತ್ರ ದೂರವಿರಲಿಲ್ಲ. ಒಂದು ಕ್ಷಣ ತನ್ನ ಮಗ್ಗುಲಲ್ಲಿರುವ ಅಪ್ಪವನ್ನು ನಿಟ್ಟಿಸಿ ನೋಡಿದಳು. ಅದನ್ನು ಕೈಗೆತ್ತಿಕೊಂಡಳು. ಬಳಿಕ ಆ ದುಃಖತ್ರಸ್ತಳಾದ ಸತಿಯು ತನ್ನ ಅಂತ್ಸಾಗರದಲ್ಲಿ ಈ ರೀತಿ ವಿಮರ್ಶಿಸಿದಳು:

"ನಮ್ಮ ತುಳುಕಟ್ಟು-ಕಟ್ಟಿನಂತೆ ನಾನು ತವರನ್ನು ಸೇರುವುದು ಹಿತವಾಗಿದ್ದರೂ, ಲೋಕದ ನ್ಯಾಯದಂತೆ—ಸತಿಯ ಕರ್ತವ್ಯದಂತೆ—ಪತಿಸೇವೆಯೇ ಹಾಗೂ ಪತಿಯ ಮನೆಯಲ್ಲಿ ದೊರಕುವ ನಿಕೃಷ್ಟ ತಂಗಳನ್ನವೇ ನನ್ನ ಪಾಲಿಗೆ ಅಮೃತಪ್ರಾಯವೆಂದು ಬಗೆದಿದ್ದೆನು. ಈ ನನ್ನ ಮನೋಧರ್ಮಕ್ಕೆ ವಿರುದ್ಧವಾಗಿ ಪತಿಯ ಮನೆಯಿಂದ ನಾನು ತಳ್ಳಲ್ಪಟ್ಟೆನು. ನನ್ನ ಸತಿಧರ್ಮಕ್ಕೆ ವಿರುದ್ಧವಾಗಿ ಅದೆಷ್ಟು ಸೌಭಾಗ್ಯ ಲಭಿಸಿದಾಗ್ಯೂ ತಾಯಿ ತಂದೆಗಳ ಮನೆಯಲ್ಲಿ ಸುಖಪಡುವಂತಾದ್ದು ನನಗೆ ವಿಷಪ್ರಾಯವೇ. ಈ ಉಭಯ ಸಂಕಷ್ಟದಲ್ಲಿ ಆಚೆ ಪತಿಯ ಮನೆಯಿಲ್ಲ; ಈಚೆ ಕೌಟುಂಬಿಕ ಗೃಹವಿಲ್ಲ. ನಿಲ್ಲುವುದಕ್ಕೆ ನೆಲೆಯಿಲ್ಲ; ಹಿಡಿಯುವುದಕ್ಕೆ ಕೊಂಬೆ ಇಲ್ಲ. ಅತ್ತ ಬಾವಿ; ಇತ್ತ ಕೆರೆ! ಹೀಗೆ ತಬ್ಬಲಿಯಾದ ನಾನು ಮಾನಭ್ರಷ್ಟಳಾಗಿ ಬದುಕುವ ಈ ವಿಷಮ ಪರಿಸ್ಥಿತಿಯಲ್ಲಿ, ಈ ವಿಷಾಕ್ತವಾದ ಅಪ್ಪವನ್ನು ಸೇವಿಸಿ ನನ್ನ ಅಸುವನ್ನು ನೀಗುವುದು ಪರಮ ಧರ್ಮ.

ಬನ್ನಾಲೆ ಮನೋನಿರ್ಧಾರ ಮಾಡಿದಳು. ಹೋಗುತ್ತಿರುವ ಪಲ್ಲಕ್ಕಿಯ ಪರದೆಯ ಎಡೆಯಿಂದ ಹೊರಗೆ ಈಕ್ಷಿಸಿದಳು.

"ಎಲೇ ಆಕಾಶವೇ! ಎಲೇ ದಿಕ್ಕುಗಳೇ! ಸುತ್ತುಮುತ್ತಲಿರುವ ಪಕ್ಷಿಸಂಕುಲಗಳೇ! ಹಸನಾಗಿ ಬೆಳೆದಿರುವ ತರುಲತೆಗಳೇ! ಅಲ್ಲಲ್ಲಿ ಮೇಯುತ್ತಿರುವ ತುರುಕರುಗಳೇ! ಜಗತ್ತನ್ನು ಬೆಳಗುತ್ತಿರುವ ಸೂರ್ಯ ದೇವನೇ! ನಾನು ಆತ್ಮಘಾತಿಯಾಗಲು ತೊಡಗಿದ್ದರೂ ನನ್ನ ನೈಜಸ್ಥಿತಿಯನ್ನು ನೀವೆಲ್ಲ ಅರಿತವರಾಗಿದ್ದೀರಿ. ಇದೋ ನಿಮಗೆಲ್ಲರಿಗೂ ನನ್ನ ವಂದನೆ! ನನ್ನ ಕೃತ್ಯಕ್ಕೆ ನೀವೆಲ್ಲ ಸಾಕ್ಷಿದಾರರು!"—ಎಂದು ನಿವೇದಿಸಿ, ದೀರ್ಘ ನಿಟ್ಟುಸಿರನ್ನೆಳೆದು, ಕಣ್ಣುಗಳಿಂದ ಕಂಬನಿಯಿಡಿಯುತ್ತ, ತನ್ನ ಕುಲದೈವವನ್ನು ನೆನೆಯುತ್ತ ಕೈಯಲ್ಲಿರುವ ಅಪ್ಪವನ್ನು ಸೇವಿಸಿದಳು.

ಪಲ್ಲಕ್ಕಿ ಕಲ್ಲುಕುಂಜಲದ ಬೀಡಿನ ಕಂಬಳದ ಕಟ್ಟುಹುಣಿಯಲ್ಲಿ ಬರುವಾಗ, ಪಲ್ಲಕ್ಕಿ ಚಾವಡಿಯಲ್ಲಿರುವ ಬನ್ನಾಲೆಯ ಏಳು ಮಂದಿ ಅಣ್ಣಂದಿರುರು ಮತ್ತು ಏಳ್ವರು ಮಾವಂದಿರಿಗೆ ದೃಗ್ಗೋಚರಿಸಿತು. ಅವರು ಕೂಡಲೆ ಅಂಗಳಕ್ಕಿಳಿದು,—

"ನಮ್ಮದೇ ತಂಗಿ! ನಮ್ಮದೇ ಸೊಸೆ! ಒಳ್ಳೆ ಮನಸ್ಸಿನಿಂದ ಬಂದಿದ್ದರೆ, ಆನೆಬಾಗಿಲಿನಿಂದ ಪ್ರವೇಶಿಸಬಹುದು. ನಿಷ್ಠುರವನ್ನು ಕಟ್ಟಿಕೊಂಡು ಬಂದಿದ್ದರೆ, ಕಿರುಬಾಗಿಲಿನಿಂದ ಹೊಗ್ಗಬಹುದು"—ಎಂದು ತಮ್ಮತಮ್ಮೊಳಗೆ ತರ್ಕಿಸಿಕೊಂಡರು.

ಪಲ್ಲಕ್ಕಿ ಆನೆಬಾಗಿಲನ್ನು ಪ್ರವೇಶಿಸಿ ಅಂಗಳದ ನಟ್ಟನಡುವೆ ಇಳಿಯಿತು.

ಏಳು ಮಂದಿ ಅಣ್ಣಂದಿರುರು, ಏಳ್ವರು ಮಾವಂದಿರುರು, ಉಮ್ಮಳಿಸುತ್ತಿರುವ ಅನುರಾಗಾತುರಗಳಿಂದ ತುಂಬಿಕೊಂಡವರಾಗಿ ಓಡೋಡುತ್ತ ಪಲ್ಲಕ್ಕಿಯ ಸನಿಯಕ್ಕೆ ಬಂದರು. ಪಲ್ಲಕ್ಕಿಯ ಪರದೆಯನ್ನು ಪಕ್ಕಕ್ಕೆ ಸರಿಸಿ ಒಳಗೆ ಇಣಿಕಿದರು. ಕೂಡಲೇ ಅನುಕ್ರಮವಾಗಿ "ಹಾ ತಂಗೀ! ಹಾ ಸೊಸೇ!"—ಎಂದು ಎದೆಬಾಯಿ ಬಿಡುತ್ತ ನಿಸ್ತೇಜಿತರಾಗಿ ಹಿಮ್ಮೆಟ್ಟಿ ನಿಂತುಬಿಟ್ಟರು! ಅರ್ಧ ತಿಂದುಳಿದ ಅಪ್ಪ ಮದುಮಲ್ತಿ ಬನ್ನಾಲೆಯ ಬಾಯಲ್ಲುಂಟು! ಅವಳ ಪ್ರಾಣಪಕ್ಷಿಯು ಗೂಡನ್ನು ಬಿಟ್ಟು—ಜೀವನ ಬಂಧದಿಂದ ಮುಕ್ತವಾಗಿ—ಹೊರಟು ಹೋಗಿತ್ತು!

ಬಂಧುಗಳ ಹಾಹಾಕಾರ ಕ್ರಂದನವು ದಶದಿಕ್ಕುಗಳಲ್ಲಿ ಪ್ರತಿಧ್ವನಿಸಿತು!

---

**ನವೋದಿತ ಆಫ್ರಿಕಾ** (ಪುಟ 1ರಿಂದ ಮುಂದುವರಿದುದು)

ಸಾಧ್ಯವಾಗಲಿಲ್ಲ. ಆ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಅವರಲ್ಲಿ ಪಾನ್ ಆಫ್ರಿಕನ್ ಒಕ್ಕೂಟವೊಂದು ಅಗತ್ಯವೆಂದು ತಿಳುವಳಿಕೆಯಾಗಿದೆ. ಆಫ್ರಿಕದ ರಾಜಕೀಯ ಮತ್ತು ಆರ್ಥಿಕ ಪ್ರಗತಿಗೆ ಇಂತಹ ಒಕ್ಕೂಟವು ಅವಶ್ಯವಿದೆ. ಆಫ್ರಿಕದಲ್ಲಿ ಪ್ರಚಾರದಲ್ಲಿರುವ ವರ್ಣದ್ವೇಷವನ್ನು ತಡೆಯಲು ಆಫ್ರಿಕನರೆಲ್ಲಾ ಒಂದಾಗಬೇಕಾಗಿದೆ.

ಆಫ್ರಿಕದಲ್ಲಿ ಇಡೀ ಖಂಡದ ನಾಯಕತ್ವವನ್ನೇ ವಹಿಸಿಕೊಳ್ಳುವ ಪ್ರಭಾವಶಾಲಿಯಾದ ಅಧಿಕ ವರ್ಚಸ್ಸುಳ್ಳ ಧುರೀಣರೊಬ್ಬರಿಲ್ಲವಾಗಿದೆ. ಇದರೊಡನೆ ಪ್ರಾದೇಶಕ ಸಂಘಟನೆಗಳಿಂದ ವಿಶಾಲ ಐಕ್ಯರಂಗ ರಚನೆಗೆ ಭಂಗಬರಬಹುದಾಗಿದೆ. ಈ ಖಂಡದ ಪ್ರಧಾನ ರಾಜ್ಯಗಳಲ್ಲಿ ಅವರವರ ನಾಯಕರಿರುವರು. ಆಲ್ಜೀರಿಯಾ ದೇಶದ ರಾಜಕೀಯ ಧುರೀಣರು ಬೇನ್‌ಬೆಲ್ಲಾ ಎಂಬವರಾಗಿರುವರು. ಗಿನಿಯದಲಿ ಸಿಕಾವೊ ಟೌರೋ ಎಂಬವರಿರುವರು. ಎನ್‌ಕ್ರೂಮಾ ಎಂಬವರು ಘಾನಾ ರಾಜ್ಯದ ಪ್ರಧಾನ ಧುರೀಣರಾಗಿದ್ದಾರೆ. ನೆಸ್ಸರರು ಈಜಿಪ್ಟಿನ ಮತ್ತು ಅರಬರ ಒಕ್ಕೂಟದ ನಾಯಕರಾಗಿದ್ದಾರೆ. ನೈಜೀರಿಯದ ಧುರೀಣರು ಅಬುಬಕರ್ ತಪೇವಾ ಆಗಿದ್ದಾರೆ. ಈ ರಾಜಕೀಯ ಧುರೀಣರಲ್ಲಿ ಐಕ್ಯ ಭಾವನೆಯು ಮೂಡಲಿಲ್ಲ. ಅವರಲ್ಲಿ ಭಿನ್ನಾಭಿಪ್ರಾಯಗಳು ಆಗಾಗ್ಯೆ ಕಂಡುಬರುತ್ತವೆ. ಅವರ ಐಕ್ಯತೆಯು ಶಕ್ತಿಶಾಲಿಯಾಗಿ ಬೆಳೆಯುವ ಚಿಹ್ನೆಗಳು ಕಾಣುವುದಿಲ್ಲ.

ಆಫ್ರಿಕನ್ ಒಕ್ಕೂಟವು ಅಸ್ತಿತ್ವಕ್ಕೆ ಬರಲು ನೂರಾರು ಅಂತರಿಕ ತೊಡಕುಗಳಿವೆ. ಅವುಗಳನ್ನು ಪರಿಹರಿಸಲು ಅವರಿಗೆ ಸಾಧ್ಯವಿದೆ. ಅವರೆಲ್ಲಾ ಪರಸ್ಪರ ಹಿತಕ್ಕಾಗಿ ಮತ್ತು ಭದ್ರತೆಗಾಗಿ ಒಟ್ಟಾಗಬೇಕು. ನೀಗ್ರೊ ಆಫ್ರಿಕದಲ್ಲಿ ಪ್ರಜಾಸತ್ತೆ ಬದುಕಿಬಾಳಬಹುದು ಎಂಬ ಆಸೆಯ ಕಿರಣವು ಕಂಡುಬರುತ್ತದೆ. ಎಚ್ಚೆತ್ತ ಆಫ್ರಿಕಾ ಒಂದು ಗತಿಯಲ್ಲಿ ಸಾಗುತ್ತಿದೆ. ಶಾಂತಿ ಸುವ್ಯವಸ್ಥೆ ವಾತಾವರಣವು ಅಲ್ಲಿ ಸ್ಥಾಪನೆಯಾದರೆ ಜಗತ್ತಿಗೆ ಸಮಾಧಾನ ದೊರಕೀತು.

—○—

# ಹೊಲ್ಲೆಂಡಿನ ಜನಜೀವನಕ್ರಮುವನ್ನು ನೋಡಿ!

ಭಾರತದಲ್ಲಿ ಬಡವರು ಹೆಚ್ಚು. ಬಡತನಕ್ಕೆ ಇರುವ ಕಾರಣಗಳಲ್ಲಿ, ಜನರ ಸೋಮಾರಿತನವೂ ಒಂದು ಕಾರಣ. ನಮ್ಮ ಸುಖಜೀವನಕ್ಕೆ ಅಥವಾ ದಾರಿದ್ರ್ಯಕ್ಕೆ ಬಹುಮಟ್ಟಿಗೆ ನಾವೇ ಕಾರಣರೆನ್ನಬೇಕು. ಪ್ರತಿಯೊಬ್ಬನೂ ಕಾಯಕಷ್ಟ ಮಾಡಬೇಕು. ನಮ್ಮ ಜೀವನಮಟ್ಟವನ್ನು ಸುಧಾರಿಸುವ ಪಣತೊಡಬೇಕು.

ಶ್ರೀ ಟಿ. ರಾಯ ಚೌಧುರಿಯವರು, ಹೊಲ್ಲೆಂಡನ್ನು ಸಂದರ್ಶಿಸಿ, ಅಲ್ಲಿಯ ಜನಜೀವನವನ್ನೀಕ್ಷಿಸಿ, ಆ ಜನರ ಯತ್ನಕ್ಕೆ, ಶ್ರಮಕ್ಕೆ, ಕಲಾಭಿರುಚಿಗೆ ವಿಸ್ಮಯಪಟ್ಟಿದ್ದಾರೆ. ಭಾರತೀಯರು ಡಚ್ಚರ ಕೆಚ್ಚೆದೆಯ, ಅಚ್ಚುಕಟ್ಟಿನ, ಕಲಾಪ್ರಿಯ ಜೀವನವನ್ನು ನೋಡಿ, ತಾವೂ ಸ್ಫೂರ್ತಿಪಡೆಯಬಹುದು

(ಲೇಖಕ: **ಟಿ. ರಾಯ್ ಚೌಧುರಿ**)

ಭಾರತೀಯರಂತೆಯೇ ಡಚ್ಚರೂ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದವರು. ಅವರು ತಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡು, ದೇಶದ ಪ್ರಗತಿಯನ್ನು ಸಾಧಿಸಿ, ತನ್ಮೂಲಕ ಸ್ವಸುಖವನ್ನು ರೂಪಿಸಿಕೊಳ್ಳಲು ಹಲವು ವಿರುದ್ಧ ಶಕ್ತಿಗಳೊಂದಿಗೆ ಹೋರಾಡಬೇಕಿತ್ತು. ಸಮುದ್ರದಾಚೆಗಿನ ದೇಶಗಳನ್ನು ಗೆದ್ದು, ಜೀವವನ್ನೇ ಪಣವಾಗಿಟ್ಟು, ಅಬ್ಬರಿಸುವ ಸಮುದ್ರಗಳಲ್ಲಿ ಧೈರ್ಯವಾಗಿ ಪ್ರಯಾಣಮಾಡಿ ವ್ಯಾಪಾರದ ಅಭಿವೃದ್ಧಿಯನ್ನು ಕಂಡು, ಕೃತಕೃತ್ಯರಾದವರು ಡಚ್ಚರು.

ಯುರೋಪಿನ ಒಂದು ಮೂಲೆಯಲ್ಲಿರುವ ದೇಶ ಹೊಲ್ಲೆಂಡ್ ಸಮುದ್ರದ ಅಂಚಿನಲ್ಲಿದೆ ಈ ದೇಶ. ಬಹು ಹಿಂದಿನ ಕಾಲದಿಂದಲೂ ನಡೆದುಬಂದಿರುವ, ಉಚ್ಚತರದ, ಆದರೆ ಹೆಚ್ಚು ಪ್ರಚಾರವಿಲ್ಲದ ಒಂದು ಬಗೆಯ ಜೀವನಕ್ರಮುವನ್ನು ಇಲ್ಲಿ ಕಾಣಬಹುದು. ಮೇಲಿಂದ ನೋಡಿದಲ್ಲಿ, ಈ ಜೀವನಕ್ರಮುದಲ್ಲಿ ಯಾವುದೇ ಒಂದು ವಿಶೇಷವನ್ನೂ ಕಾಣಲು ಸಾಧ್ಯವಿಲ್ಲ; ಇದ್ದರೂ, ಹೊಕ್ಕಿ ನೋಡಿದಲ್ಲಿ, ಇದರ ಮಹತ್ವದ ಅರಿವಾಗದೇ ಇರದು.

ಯುರೋಪ್ ಖಂಡವು ಅಷ್ಟೇನೂ ವಿಶಾಲವಾದದ್ದಲ್ಲವಾದರೂ, ಅಲ್ಲಿ ಹಲವು ತರಹೆಯ ಸಂಸ್ಕೃತಿಗಳನ್ನು ಕಾಣಬಹುದು. ಅದೇ ರೀತಿಯಲ್ಲಿ, ಒಂದು ಕಾಲದಲ್ಲಿ ಸ್ಪೈಯಿನಿನ ಆಳ್ವಿಕೆಗೆ ಒಳಪಟ್ಟಿದ್ದ ದೇಶವಾದ ಹೊಲ್ಲೆಂಡ್ ಸಹ ವೈವಿಧ್ಯತೆಗೆ ತವರೂರಾಗಿದೆ.

ಒಂದು ಚಿತ್ರ! ಪೀಟರ್ ಡೀ ಹ್ಯೂಗ್ ಎಂಬ ಕಲಾವಿದನು ನಿರ್ಮಿಸಿದ್ದು!. . . . . .ಸುಂದರವಾದ ಗ್ರಾಮ. ಅದೇ ವಾದಿಸಿದ ದಿನಕರನ ಕಿರಣಗಳು ಮರಗಳ ಸಂದಿನಿಂದ ಪ್ರವೇಶಿಸಿವೆ. ಗೌರವಾನ್ವಿತ ವ್ಯಕ್ತಿಯೊಬ್ಬ ಬಾಯಲ್ಲಿ "ಪೈಪ್" ಇಟ್ಟುಕೊಂಡು ಹೊಗೆ ಬಿಡುತಿದ್ದಾನೆ. ಬಳಿಯಲ್ಲಿಯೇ, ಆ ವ್ಯಕ್ತಿಯ ಯಜಮಾನಿ ಕೈಯಲ್ಲಿ ಒಂದು ಗಾಜಿನ ಬಟ್ಟಲನ್ನು ಹಿಡಿದು ವೈಯಾರದಿಂದ ನಿಂತಿದ್ದಾಳೆ. ಆ ಬಟ್ಟಲಲ್ಲಿ ಸ್ವರ್ಣವರ್ಣದ ಪಾನೀಯವಿದೆ. ಒಂದು ಮೂಲೆಯಲ್ಲಿ ನಾಯಿಯು ಮಲಗಿ ನಿದ್ರಿಸುತ್ತಿದೆ. ಕಿಟಿಕಿಯಿಂದಾಚೆ ಕಾಣುತ್ತಿರುವ ದೂರದ ತಟಾಕದ ಸುತ್ತಲೂ ಇರುವ ವೃಕ್ಷಗಳ ಕೆಳಗೆ ಇರುವ ಆಸನಗಳ ಮೇಲೆ ಹಲವಾರು ಮಂದಿ ಕುಳಿತಿದ್ದಾರೆ. ಕೆಲವರ ಎದುರಿನಲ್ಲಿರುವ ಮೇಜುಗಳ ಮೇಲೆ ಪಾನೀಯಗಳಿಡಲ್ಪಟ್ಟಿವೆ.

ಈ ಚಿತ್ರವು ಡಚ್ಚರ ಜೀವನಕ್ರಮುವನ್ನು ನಮ್ಮ ಕಣ್ಣಮುಂದೆ ನಿಲ್ಲಿಸುತ್ತದೆ. ಚಿತ್ರದಲ್ಲಿ ಕಂಡುಬರುವ ಸುಂದರ ಪುಷ್ಪಗಳನ್ನು ಹಾಗೆಯೇ ನೋಡುತ್ತಾ ನಿಂತುಬಿಡಬೇಕೆನ್ನಿಸುತ್ತದೆ. ಒಂದೊಂದು ವ್ಯಕ್ತಿಯ ಮುಖದಲ್ಲಿಯೂ ಪೂರ್ಣ ತೃಪ್ತಿಯು ತಾಂಡವವಾಡುತ್ತಿದೆ. ಚಿತ್ರಿಸಲ್ಪಟ್ಟಿರುವ ಹೂವಿನ ಕುಂಡಗಳಲ್ಲಿ ಬಿರಿದು ನಲಿಯುತ್ತಿರುವ ಹೂಗಳ ಸಮೃದ್ಧತೆಯಿಂದಲೇ ಡಚ್ಚರು ಪ್ರಕೃತಿ ಸೌಂದರ್ಯಾಧಿ ದೇವತೆಯ ಆರಾಧಕರೆಂದು ತಿಳಿಯಬಹುದಾಗಿದೆ.

ಪ್ರಾತಃಕಾಲದಲ್ಲಿ ಮಧುವನ್ನು ಹಿಡಿದು ಕುಳಿತಿರುವ ಹೆಣ್ಣು-ಗಂಡುಗಳನ್ನು ನೋಡಿ, ಡಚ್ಚರನ್ನು ಸೋಮಾರಿಗಳೆಂದೋ ಕರ್ತವ್ಯದ್ರೋಹಿಗಳೆಂದೋ ತಿಳಿಯಬಾರದು. ಅವರ ಮುಖದಲ್ಲಿ ಚಿತ್ರಿತವಾಗಿರುವ ಪೂರ್ಣ ತೃಪ್ತಿಯು ಕಾಯಕಷ್ಟಗಳನ್ನು ಅನುಭವಿಸಿ, ತತ್ಫಲವಾಗಿ ಅನುಭವಿಸುತ್ತಿರುವ ಸುಖದ ಛಾಯೆ. ಕರ್ತವ್ಯನಿರ್ವಹಣೆಯೇ ಅವರಿಗೆ ಹೊತ್ತು ನೀಗಿಸುವ ಸಾಧನ.

ಡಚ್ಚರಿಗೆ ತಮ್ಮ ಮನೆ, ಮಡದಿ, ಸಂಸಾರಗಳೆಂದರೆ ಇನ್ನಿಲ್ಲೂ ಇಲ್ಲದ ಅಭಿಮಾನ! ಅವುಗಳನ್ನು ಸರ್ವಸುಂದರವಾಗಿಡಲು ಯತ್ನಿಸುತ್ತಿರುತ್ತಾರೆ. ಕೈಗಾರಿಕಾಕರಣವಾದ ರಾಷ್ಟ್ರಗಳಲ್ಲಿ ಅವಿಭಕ್ತ ಕುಟುಂಬಗಳನ್ನು ಕಾಣುವುದೇ ಕಷ್ಟ! ಆದರೆ, ನೆದರ್‌ಲೇಂಡ್ಸಿನಲ್ಲಿ ಅದರ ಮಹತ್ವವು ಇನ್ನೂ ಮಾಸದಂತಿದೆ.

ಕಾರ್ಖಾನೆಯಲ್ಲಿಯೋ, ಕಚೇರಿಯಲ್ಲಿಯೋ ಎಂಟು ಗಂಟೆಗಳ ಕಾಲ ದುಡಿದು ಮನೆಗೆ ಹಿಂದಿರುಗಿದ ಡಚ್ಚನು ಆರಾಮವಾಗಿ ಕುಳಿತುಬಿಡುವುದಿಲ್ಲ. ಗೃಹಾಲಂಕಾರವೋ, ಗೋಡೆಗಳಿಗೆ ಬಣ್ಣ ಬಳಿಯುವುದರಲ್ಲಿಯೋ ಮಗ್ನನಾಗುತ್ತಾನೆ. ಅನಂತರ, ಅವನೂ ಅವನ ಸ್ನೇಹಿತರೂ ಕೂಡಿ ಆ ಕೆಲಸಗಳ ಬಗ್ಗೆ ಚರ್ಚಿಸುತ್ತಾರೆ. ಯಾವುದೇ ಕಾರ್ಯದಲ್ಲಾಗಲೀ ಅವರು ದೇವರನ್ನು ಕಾಣುತ್ತಾರೆ.

ಡಚ್ಚರು ಯುದ್ಧದ್ವೇಷಿಗಳು! ಸಮಾಧಾನ, ಸಹಬಾಳ್ವೆ ಅವರ ಚಿರಪರಿಚಿತ ಮಂತ್ರಗಳು! ಯುದ್ಧದಿಂದಾಗಿ ಅವರ ದೇಶವೆಲ್ಲಾ ಬೆಂಗಾಡಾಗಿ ಹೋಗಿತ್ತು. ಸದ್ಯಕ್ಕೆ ನೆಲಸಿರುವ ಶಾಂತಿಯಿಂದ ಆ ಬೆಂಗಾಡೆಲ್ಲವನ್ನೂ ಹಚ್ಚಹಸುರಿನ ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ ಮಹಾ ಕೀರ್ತಿಗಾಗಿ ಡಚ್ಚರು ಧೈರ್ಯದಿಂದ ಭುಜವನ್ನು ತಟ್ಟಿಕೊಳ್ಳಬಹುದು.

## ಹತ್ತೊಂಭತ್ತು ಕೋಟಿ ರೂಪಾಯಿ ವಿದೇಶೀ ವಿನಿಮಯ ಗಳಿಸುವ ಗೇರುಬೀಜ

ಗೇರುಬೀಜವು ಭಾರತಕ್ಕೆ ವರ್ಷಕ್ಕೆ ಹತ್ತೊಂಭತ್ತು ಕೋಟಿ ರೂಪಾಯಿಗಳಷ್ಟು ವಿದೇಶೀ ವಿನಿಮಯವನ್ನು ಗಳಿಸಿಕೊಡುತ್ತಿದೆ.

ಪೋರ್ಚುಗೀಸರು, ಪ್ರಥಮದಲ್ಲಿ ಇದನ್ನು ಮಣ್ಣು ಕೊರೆತವನ್ನು ತಡೆವ ಸಲುವಾಗಿ, ಭಾರತಕ್ಕೆ ತಂದು ನೆಟ್ಟರು. ಸುಮಾರು ಮೂವತ್ತು ವರ್ಷಗಳ ವರೆಗೆ, ಪೋರ್ಚುಗೀಸರಿಗೆ, ಈ ಮರದಲ್ಲಿ ಹುಟ್ಟುವ ಹಣ್ಣಿನ ಬೀಜಗಳು ರುಚಿಕರವೂ ಪುಷ್ಟಿಕರವೂ ಎಂದು ತಿಳಿದಿರಲಿಲ್ಲ.

ಸಾವಿರ ವರ್ಷಗಳಿಗೂ ಹಿಂದೆ, ಚಹಾ ಎಲೆಯನ್ನು ಕಂಡುಹಿಡಿದಾಗ, ಮೊದಲಿನ ಚಹಾಸೇವಕರು ಚಹಾ ಕಷಾಯದ ಗುಣವನ್ನು ತಿಳಿಯದೆ ಕಷಾಯವನ್ನು ಬಿಸಾಡಿ, ಬೆಂದ ಎಲೆಗಳನ್ನು ಜಗಿಯುತಿದ್ದರಂತೆ. ಹಾಗೆಯೇ ಪೋರ್ಚುಗೀಸರು ಕೂಡ, ಮೊದಮೊದಲು ಗೇರಬೀಜಗಳನ್ನು ತಿನ್ನದೆ ಸಮುದ್ರಕ್ಕೆ ಬಿಸಾಡಿ, ಅವು ತೇಲುತಿದ್ದ ಅಂದವನ್ನು ನೋಡಿ ಆನಂದಪಡುತಿದ್ದರು. ಮೂವತ್ತು ವರ್ಷಗಳ ನಂತರ, ಅದರೊಳಗಿನ ಬೀಜದ ರುಚಿ ತಿಳಿಯಿತು. ಗೋವೆಯಲ್ಲಿ, ಪಶ್ಚಿಮ ಕರಾವಳಿಯಲ್ಲಿ ಪ್ರಥಮತಃ ನೆಟ್ಟ ಗೇರು, ಇಂದು ಮದರಾಸು, ಕೇರಳ, ಮೈಸೂರು ಮತ್ತು ಆಂಧ್ರ ಪ್ರದೇಶ—ಈ ನಾಲ್ಕು ರಾಜ್ಯಗಳಲ್ಲಿ ಬೆಳೆಸಲ್ಪಡುತ್ತಿದೆ.

ಅಮೇರಿಕವು, ಗೇರುಬೀಜ ಖರೀದಿಸುವ ರಾಷ್ಟ್ರಗಳಲ್ಲಿ ಪ್ರಥಮ ಸ್ಥಾನ ಪಡೆಯುತ್ತದೆ.

1960-61ರಲ್ಲಿ ಭಾರತದಲ್ಲಿ ತಯಾರಾದ ಗೇರುಬೀಜ 1,50,000 ಟನ್. ಮಂಗಳೂರು, ಕೊಚ್ಚಿ ಮೊದಲಾದ ಕಡೆಗಳಲ್ಲಿನ ಗೇರುಬೀಜ ಕಾರ್ಖಾನೆಗಳನ್ನು ಕೆಲಸದಲ್ಲಿರಿಸಲು ಮೊಝಾಂಬಿಕ್, ತಾಂಗನ್ಯಿಕಾ ಮತ್ತು ಕೆನ್ಯಾದಿಂದ ಒಂದು ಲಕ್ಷ ಟನ್ ಹಸಿ ಬೀಜಗಳನ್ನು (ವರ್ಷಕ್ಕೆ) ಆಮದು ಮಾಡಬೇಕಾಗಿದೆ.

## ಸ್ವಾತಂತ್ರ್ಯದೇವೀ!

ಬಂದು ನಿಂತಿಹೆಯಾ, ಸ್ವಾತಂತ್ರ್ಯ ದೇವತೆಯೆ ।
ನಿನ್ನ ನಿಜ ಭಕುತರನ್ನು ತಬ್ಬಿಕೊಂಡು ॥
ಪುಣ್ಯವತಿ ಭಾರತಿಯು ಹರ್ಷತಾಳಿಹಳು ।
ಆರತಿಯ ನಿನಗಾಗಿ ಹಿಡಿದು ನಿಂದಿಹಳು ॥ ೧ ॥

ಪರದಾಸ್ಯ ಕತ್ತಲಲಿ ಕಂಗೆಟ್ಟ ಬಡಜನಕೆ ।
ನವಚೇತನವ ನೀಡಿ ದಾರಿ ತೋರ್ದೆ ॥
ಬಿಳಿಜನರ ದರ್ಪ-ಕ್ರೌರ್ಯಾಧಿಕಾರದಿಂ ।
ಮುಕ್ತರಾಗಿಸಿಯೆಮ್ಮ ಹರಸಿ ಕಾಯ್ದೆ ॥ ೨ ॥

ಪ್ರಭುರಾಜ್ಯವಳಿದು ಪ್ರಜಾರಾಜ್ಯವುಳಿದು ।
ಕಳೆದುಹೋದುವು ಹದಿನಾರು ವರ್ಷ ॥
ಚೇತನದಾಯಿನಿ ಓ ಸ್ವಾತಂತ್ರ್ಯದೇವಿ ।
ನಿನಗೆ ನಮಿಸಲು ಮನದಿ ಉಕ್ಕುತಿದೆ ಹರ್ಷ ॥ ೩ ॥

—**ಕೆ. ಶ್ರೀಧರ.**

# "ವಸುಧೈವ ಕುಟುಂಬಕಮ್"

(ಬರೆದವರು: ಶ್ರೀ. ಎಸ್. ತಿರುಮಲೇಶ್ವರ ಭಟ್ಟ, ವಿದ್ವಾನ್, ಮಂಗಳೂರು.)

"ಉದಾರ ಚರಿತಾನಾಂ ತು ವಸುಧೈವ ಕುಟುಂಬಕಮ್" ಎಂಬ ಸೂಕ್ತಿಯು ಉದಾರಚರಿತರ ಉದಾತ್ತಪುರುಷರ ಪರಿಪೂರ್ಣ ಲಕ್ಷಣವನ್ನು ಸಾರುತ್ತಿರುವುದು. ಯಾರು ಕೇವಲ ತಾನು ತನ್ನದೆಂಬ ಸಂಕುಚಿತ ಭಾವನೆಯನ್ನುಳಿದು ಸಕಲ ಜಗತ್ತೇ ತನ್ನ ಕುಟುಂಬವೆಂಬ ವಿಶಾಲ ಭಾವನೆಯುಳ್ಳವರೋ ಅವರೇ ಉದಾರಚರಿತರು, ಅವರೇ ಉದಾತ್ತಪುರುಷರು.

ಇಂದಿನ ಯುಗವು ಸ್ವಾತಂತ್ರ್ಯಯುಗ, ಪ್ರತಿಯೊಬ್ಬ ಪ್ರಜೆಯೂ ಸ್ವತಂತ್ರಭಾರತದ ನಾಗರಿಕ. ಪ್ರತಿಯೊಬ್ಬ ನಾಗರಿಕನೂ ಅಖಂಡ ವಿಶ್ವದ ಅಂಗಪ್ರತ್ಯಂಗ. ಈ ವಿಚಾರವನ್ನು ಆಳವಾಗಿ ಆಲೋಚಿಸಿದಲ್ಲಿ ಮನಗಾಣಬಹುದು. ರಾಷ್ಟ್ರದ ರಕ್ಷಣೆಯಾಗಬೇಕಾದರೆ ರಾಷ್ಟ್ರೀಯ ಭಾವನೆಯು ಪ್ರತಿಯೋರ್ವನಲ್ಲಿಯೂ ಉತ್ಪನ್ನವಾಗಿ ರೂಢಮೂಲವಾಗಿ ಬೆಳೆಯಬೇಕು. ಅದಕ್ಕಾಗಿ ಇಂದಿನ ಮಕ್ಕಳಿಗೆ ಅಂತಹ ರಾಷ್ಟ್ರೀಯ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕು.

ರಾಷ್ಟ್ರರಕ್ಷಣೆಯಾಗಬೇಕಾದರೆ, ರಾಷ್ಟ್ರದ ಸ್ವಾತಂತ್ರ ಉಳಿದು ಚಿರಸ್ಥಾಯಿಯಾಗಬೇಕಾದರೆ ರಾಷ್ಟ್ರದ ಪ್ರತಿಯೋರ್ವ ಸ್ತ್ರೀಪುರುಷನಲ್ಲಿ ರಾಷ್ಟ್ರಪ್ರೇಮದ ಆವಿರ್ಭಾವವಾಗಬೇಕು. ಇಂದಿನ ವಾತಾವರಣದಲ್ಲಿ ರಾಷ್ಟ್ರರಕ್ಷಣೆಯ ವಿಚಾರವು ಮಹತ್ವಪೂರ್ಣವೂ ಅನಿವಾರ್ಯಕಾರ್ಯವೂ ಆಗಿರುವಾಗ ಅದನ್ನು ವಿವೇಚಿಸುವುದು ಕಾಲೋಚಿತವಾಗಬಹುದು.

ರಾಷ್ಟ್ರಪ್ರೇಮವೆಂದೊಡನೆ ತನ್ನ ರಾಷ್ಟ್ರವನ್ನು ಪ್ರೀತಿಯಿಂದ ಭಕ್ತಿಯಿಂದ ಕಾಣುವುದು ಮಾತ್ರವಲ್ಲ ಬಿಂದಿಗೆ ಅನ್ಯರಾಷ್ಟ್ರಗಳನ್ನು ವಿರೋಧಿಸದೆ ವಿಶ್ವಾಸ ಪೂರ್ಣದೃಷ್ಟಿಯಿಂದ ನೋಡುವುದು ಕೂಡ ರಾಷ್ಟ್ರಪ್ರೇಮದ ಅಂಗವಾಗಿದೆ. ಜಪಾನು, ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೂರ್ವದಿಂದಲೇ ಅಲ್ಲಿಯ ಬಾಲಕ ಬಾಲಿಕೆಯರಿಗೆ ರಾಷ್ಟ್ರಪ್ರೇಮದ ಕುರಿತಾದ ಶಿಕ್ಷಣವೀಯಲಾಗುತ್ತಿತ್ತು. ಇದರಿಂದ ಅಲ್ಲಿಯ ಬಾಲಕ ಬಾಲಿಕೆಯರು ಬಳೆದು ದೊಡ್ಡವರಾದಾಗ ರಾಷ್ಟ್ರಪ್ರೇಮಿಗಳಾಗಿ ತಮ್ಮ ರಾಷ್ಟ್ರಕ್ಕಾಗಿ ತನುಮನಧನ ತ್ಯಾಗಮಾಡಲು ಸಿದ್ಧರಾಗುವರು. ಅಲ್ಲದೆ ತಮ್ಮ ರಾಷ್ಟ್ರದ ಏಳಿಗೆಯನ್ನು ಸಾಧಿಸುವ ದೃಷ್ಟಿಯಿಂದ ಅನ್ಯರಾಷ್ಟ್ರಗಳನ್ನು ವಿರೋಧಿಸುವ ಮನೋಭಾವವುಳ್ಳವರಾಗುವರು. ಇದರಿಂದಲೇ ಜಪಾನು ನೆರೆಯ ಚೀನಾವನ್ನು ವಿರೋಧಿಸಿತು, ಲಂಡನ್ ಜರ್ಮನಿಯನ್ನು ಜಯಿಸಲೆಳಸಿತು. ಇದರಿಂದ ಜಪಾನಿನ ಹಾಗೂ ಲಂಡನಿನ ಪ್ರಜೆಗಳಲ್ಲಿ ನಾವು ಕಾಣುವ ರಾಷ್ಟ್ರಪ್ರೇಮವು ಇದು ಸಂಕುಚಿತ ಹಾಗೂ ಕುರುಡು ರಾಷ್ಟ್ರಪ್ರೇಮವಾಗಿರುವುದೆಂಬುದು ತಿಳಿಯುವುದು.

"ತಾನೂ ಬಾಳಬೇಕು ಪರರೂ ಬದುಕಬೇಕು" ಇದು ಶುದ್ಧ ಪವಿತ್ರ ರಾಷ್ಟ್ರಪ್ರೇಮದ ಸ್ವರೂಪ. ನಮ್ಮ ಸ್ವತಂತ್ರ ಭಾರತದ ಮಹಾ ಪ್ರಧಾನಿಗಳಾದ ಪಂ. ನೆಹರೂರವರು ಇಂದಿನ ರಾಜಕೀಯದಲ್ಲಿ ಇದೇ ತತ್ವವನ್ನನುಸರಿಸುತ್ತಿರುವುದರಿಂದಲೇ ಭಾರತವು ಅನ್ಯರಾಷ್ಟ್ರಗಳ ಸಾಹಾಯ್ಯ ಸಹಕಾರಗಳಿಗೆ ಪಾತ್ರವಾಗಿದೆ. ಭಾರತವಿಂದು ಜಗತ್ತಿನ ಸ್ವತಂತ್ರ ರಾಷ್ಟ್ರಗಳಲ್ಲಿ ಹಿರಿಮೆಯ ಸ್ಥಾನವೊಂದನ್ನು ಗಳಿಸಿದೆ. ಅದಕ್ಕೆ ಭಾರತೀಯರ ಪವಿತ್ರ ರಾಷ್ಟ್ರಪ್ರೇಮವೇ ಕಾರಣವಾಗಿರುವುದು. ಈ ರಾಷ್ಟ್ರಪ್ರೇಮವೇ ವಿಶ್ವಪ್ರೇಮವೆಂಬ ನಾಮಾಂತರಕ್ಕೂ ಪಾತ್ರವಾಗಬಲ್ಲುದು.

ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಯೆಂದೊಡನೆ ರಾಷ್ಟ್ರದ ನದೀ ನದ ಗಿರಿ ಕಾನನ ಕಂದರಗಳನ್ನು ಪೂಜಿಸುವುದರಲ್ಲಿ; ರಾಷ್ಟ್ರದ ಜನತೆಯನ್ನು ಕೌಟುಂಬಿಕ ದೃಷ್ಟಿಯಿಂದ ಪ್ರೇಮದಿಂದ ಕಾಣುವುದು. ಹಾಗೆನ್ನುವಾಗ ಭಾರತದ ನೆರೆಯ ರಾಷ್ಟ್ರವಾದ ಚೀನಾದೇಶವಿಂದು ಭಾರತದ ಮೇಲೆ ಆಕ್ರಮಣ ಮಾಡುವಾಗ ನಾವು ವಿರೋಧಿಸದೆ ವಿಶ್ವಪ್ರೇಮ ದೃಷ್ಟಿಯಿಂದ ಕಾಣಬೇಕೇನು? ಹೌದು, ಯುದ್ಧದ ಅವಸರವನ್ನು ಆದಷ್ಟು ತಪ್ಪಿಸಲು ಹಾಗೆ ಕಾಣಬೇಕು.

(6ನೇ ಪುಟಕ್ಕೆ ಮುಂದುವರಿದಿದೆ)

## ವಸುಧೈವ ಕುಟುಂಬಕಮ್

(೫ನೇ ಪುಟದಿಂದ ಮುಂದುವರಿದುದು)

ಪಂಡಿತ ನೆಹರೂರವರು ಈ ದೃಷ್ಟಿಯಿಂದಲೆ ಕಳೆದ ವರುಷ ಚೀನಾದೇಶವು ಭಾರತದ ಗಡಿಯನ್ನು ದಾಟಿ ಮುಂದೊತ್ತಿದಾಗಲೂ ತಾಳ್ಮೆಯಿಂದಿದ್ದು ಸಂದರ್ಭೋಚಿತವಾಗಿ ವರ್ತಿಸಿದುದು ಅವರ ವಿಚಾರಸಂಪನ್ನತೆಗೆ ಸಾಕ್ಷಿಯಾಗಿದೆ.

ರಾಷ್ಟ್ರಪ್ರೇಮಿಗಳೆನಿಸಿದ ಹಲವು ಮಂದಿ ಮುಖಂಡರು ಚೀನಾದೊಡನೆ ಯುದ್ಧವನ್ನೆ ಸಾರಬೇಕೆಂದು ಗರ್ಜಿಸಿದ್ದರು. ಈಗಲೂ ಚೀನಾದ ಸಮರ ಸನ್ನಾಹ ನಡೆಯುತ್ತಿದೆಯೆಂದು ನಾವು ಪತ್ರಿಕೆಗಳ ಮೂಲಕ ತಿಳಿಯುತ್ತಿರುವಾಗ ಈ ಬಾರಿಯಾದರೂ ಚೀನಾದೊಂದಿಗೆ ಯುದ್ಧವೇ ಸಿದ್ಧವೆಂದು ರಾಷ್ಟ್ರಪ್ರೇಮೋನ್ಮತ್ತರಾಗಿ ಗರ್ಜಿಸುವವರಿರುವರು. ಆದರೆ ಹಾಗೆ ಒಮ್ಮಿಂದೊಮ್ಮೆಗೆ ಯುದ್ಧವನ್ನೇ ಆಹ್ವಾನಿಸಿದರೆ ವಿಶ್ವಶಾಂತಿಗೇ ಭಂಗಬಾರದಿರದು. ಆದುದರಿಂದ ನಮ್ಮ ಸಂಕುಚಿತ ರಾಷ್ಟ್ರಪ್ರೇಮದಿಂದ ಅನ್ಯರಾಷ್ಟ್ರ ವಿರೋಧಿಗಳಾಗದೆ ಅನ್ಯರಾಷ್ಟ್ರಗಳ ಮೈತ್ರಿಯಿಂದ ನಮ್ಮ ರಾಷ್ಟ್ರದ ಏಳಿಗೆಯನ್ನು ಸಾಧಿಸೋಣ. ಅನಿವಾರ್ಯವಾದರೆ ಮಾತ್ರ ಅನ್ಯರಾಷ್ಟ್ರಗಳ ವಿರೋಧವನ್ನು ಕಟ್ಟಿಕೊಳ್ಳದೆ ಉಪಾಯವಿಲ್ಲ.

ರಾಷ್ಟ್ರಪ್ರೇಮವನ್ನು ನಾವು ಹೇಗೆ ತೋರ್ಪಡಿಸಬೇಕೆಂಬುದು ನಮ್ಮ ಮುಂದಿರುವ ವಿಚಾರ. ರಾಷ್ಟ್ರಧ್ವಜವನ್ನು ಏರಿಸಿ ವಂದನೆ ಸಲ್ಲಿಸಿ ರಾಷ್ಟ್ರಗೀತೆ ಹಾಡಿದ ಮಾತ್ರದಿಂದ ಒಬ್ಬನು ರಾಷ್ಟ್ರಪ್ರೇಮಿಯಾಗುವುದಿಲ್ಲ. ರಾಷ್ಟ್ರದ ಯಾವ ಭಾಗವೇ ಇರಲಿ, ಅಲ್ಲಿಯ ಜನ ಯಾವ ಜಾತಿಮತದವನೇ ಇರಲಿ, ಅವನು ಭಾರತೀಯನು, ನಮ್ಮವನು ಎಂಬ ಆತ್ಮೀಯ ಭಾವನೆಯು ನಮ್ಮ ಹೃದಯಾಂತರಾಳದಲ್ಲಿ ಮೂಡುವುದೇ ರಾಷ್ಟ್ರಪ್ರೇಮದ ದಿವ್ಯಸ್ವರೂಪ. ಭಾರತದ ದಕ್ಷಿಣ ಕೋಟಿಯ ಪ್ರಜೆಯೊಬ್ಬನಿಗೆ ಏನಾದರೂ ಆಘಾತ ಸಂಭವಿಸಿದರೆ ಭಾರತದ ಉತ್ತರ ಕೋಟಿಯವನ ಹೃದಯಕ್ಕೆ ನೋವಾದಲ್ಲಿ ಅವನಲ್ಲಿ ರಾಷ್ಟ್ರಪ್ರೇಮವಿದೆಯೆನ್ನಬಹುದು.

ಒಂದು ದೇಹದ ಯಾವ ಭಾಗವೇ ಇರಲಿ, ಉದಾಹರಣೆಗಾಗಿ ಕಾಲಿಗೊಂದು ಮುಳ್ಳು ತಾಗಿದರೆ ಇಡಿ ದೇಹಕ್ಕೆ ಅದರ ನೋವು ಉಂಟಾಗುವುದು. ಅದರಿಂದ ನೊಂದುಕೊಂಡು, ಕಣ್ಣು ಅದನ್ನು ಪರಿಶೀಲಿಸಿ ನೋಡಿ ಕೈ ಅದನ್ನು ಕಿತ್ತು ತೆಗೆಯಲು ಯತ್ನಿಸುವುದು. ಹೀಗೆ ದೇಶದ ಯಾವ ಭಾಗಕ್ಕೇ ಆಗಲಿ, ಅಪಾಯ, ಆಕ್ರಮಣ, ಬರಗಾಲದ ಭೀತಿ, ನೆರೆಯ ದುಷ್ಪರಿಣಾಮ ಇತ್ಯಾದಿ ಅನಾಹುತಗಳು ಸಂಭವಿಸಿದಲ್ಲಿ ದೇಶದಾದ್ಯಂತ ಎಲ್ಲ ಜನರು ಅನುಕಂಪ ಅನುತಾಪಗಳನ್ನು ವ್ಯಕ್ತಪಡಿಸಿ ತಮ್ಮಿಂದಾದ ಸಹಾಯ ಸಹಕಾರಗಳನ್ನು ನೀಡಬೇಕು. ಹಿಂದೆ ಹೇಳಿದಂತೆ ರಾಷ್ಟ್ರವೆಂದರೆ ರಾಷ್ಟ್ರದ ಜನತೆಯೆಂಬುದನ್ನು ನಾವು ಮರೆಯಬಾರದು.

ನಮ್ಮ ರಾಷ್ಟ್ರದ ಅಭಿವೃದ್ಧಿಗಾಗಿ ಪ್ರಯತ್ನಿಸುವುದರೊಂದಿಗೆ ಅನ್ಯರಾಷ್ಟ್ರಗಳ ಮೈತ್ರಿಯನ್ನೂ ಸಂಪಾದಿಸಿಕೊಳ್ಳಬೇಕು. ಒಂದು ರಾಷ್ಟ್ರದ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಬೆಳೆದ, ಉತ್ಪತ್ತಿಯಾದ ಸರಕುಗಳಿಗೆ ಅನ್ಯರಾಷ್ಟ್ರದಲ್ಲಿ ವಿಕ್ರಯ ಸೌಕರ್ಯ ದೊರೆಯಬೇಕು. ಅಂತೆಯೇ ಅನ್ಯ ರಾಷ್ಟ್ರಗಳಲ್ಲಿ ತಯಾರಾಗುವ ಸರಕು ಸಾಮಗ್ರಿಗಳ ಯಂತ್ರೋಪಕರಣಗಳ ಆಯಾತವೂ ತಮ್ಮ ರಾಷ್ಟ್ರಕ್ಕೆ ಅಗತ್ಯವಾಗಿರುವುದು. ಈ ದೃಷ್ಟಿಯಿಂದ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಸ್ನೇಹಸಹಕಾರಗಳನ್ನಿಟ್ಟುಕೊಂಡಲ್ಲಿ ಅದರ ಪ್ರಗತಿಗೆ ಸಹಾಯವಾಗಬಹುದು.

ಈ ದಿನಗಳಲ್ಲಿ ಒಂದು ರಾಷ್ಟ್ರವು ಅಪಾಯಕ್ಕೀಡಾದಾಗ ಉಳಿದ ರಾಷ್ಟ್ರಗಳು ಅದರ ಗೊಡವೆಯೇ ಇಲ್ಲದೆ ತಟಸ್ಥಭಾವದಿಂದ ಕೈಕಟ್ಟಿ ಕೂತುಕೊಳ್ಳುವಂಥ ಪರಿಸ್ಥಿತಿಯಲ್ಲಿಲ್ಲ. ವಿಶ್ವದ ಯಾವ ಮೂಲೆಯಲ್ಲಿ ಏನು ಸಂಭವಿಸಿದರೂ ಕೂಡ ಅದರ ದುಷ್ಪರಿಣಾಮಕ್ಕೆ ಎಲ್ಲ ರಾಷ್ಟ್ರಗಳು ಒಳಗಾಗಲೇಬೇಕಾಗಿದೆ. ಅದಕ್ಕಾಗಿಯೇ ಜಿನಿವಾದಲ್ಲಿ ಹದಿನೇಳು ರಾಷ್ಟ್ರಗಳ ನಿಶ್ಯಸ್ತ್ರೀಕರಣ ಸಮ್ಮೇಳನ ನಡೆಯಿತು. ಆದರೆ ಅದೇ ಕಾಲದಲ್ಲಿ ಅಮೇರಿಕವು ಶಾಂತಸಾಗರದಲ್ಲಿ ಪರಮಾಣು ಪ್ರಾಯೋಗಿಕ ಸ್ಫೋಟನವನ್ನೆಸಗಿ ಶಾಂತಿಗೆ ಭಂಗವನ್ನೊಡ್ಡಿತು. ಅಮೇರಿಕವು ಕೈಕೊಂಡ ಈ ಪ್ರಯೋಗವು ಶಾಂತಿಪ್ರಿಯ ರಾಷ್ಟ್ರಗಳ ಕಳವಳಕ್ಕೆ ಕಾರಣವಾಗಿದೆ. ಹೀಗಿದ್ದರೂ ಜಿನಿವಾ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಗಳು ಎಲ್ಲ ರಾಷ್ಟ್ರಗಳೂ ಅನ್ಯೋನ್ಯ ಸೌಹಾರ್ದದೃಷ್ಟಿಯಿಂದಿರಬೇಕೆಂಬ ನಮ್ಮ ಶಾಂತಿಯುತ ನಿಲುಮೆಯನ್ನು ಸ್ಪಷ್ಟಪಡಿಸಿದ್ದಾರೆ.

ಇತ್ತ ಭಾರತವು ಒಂದೆಡೆ ಚೀನಾದ ಮತ್ತೊಂದೆಡೆ ಪಾಕಿಸ್ತಾನದ ಆಕ್ರಮಗಳನ್ನು ಎದುರಿಸಬೇಕಾಗಿದೆ. ಈಗ ನಾವು ಇಲ್ಲಿ ರಾಷ್ಟ್ರಪ್ರೇಮ

(7ನೇ ಪುಟಕ್ಕೆ ಮುಂದುವರಿದಿದೆ)

# ವೀರರಾಣಿ ಕಿತ್ತೂರ ಚೆನ್ನಮ್ಮ

(ಲೇಖಕ:—**ಉಮೇಶ್ ರಾವ್, ಯೆಕ್ಕಾರು**)

ಪರಕೀಯರಾದ ಆಂಗ್ಲರ ದಬ್ಬಾಳಿಕೆಯಿಂದ ದೇಶಮಾತೆಯನ್ನು ವಿಮೋಚನೆಗೊಳಿಸಿ ಸ್ವಾತಂತ್ರ್ಯದ ಸಗ್ಗ ಸುಖವನ್ನು ಅನುಭವಿಸಲಿಕ್ಕಾಗಿ ಎಷ್ಟೆಷ್ಟೋ ವೀರರು ಕಾದಾಡಿದರು. ಆಂಗ್ಲರು—ಮೋಸದ ಬಲೆಯಲ್ಲಿ ಭಾರತೀಯರನ್ನು ಸಿಲುಕಿಸಿ, ಸ್ವಾರ್ಥ ಸಾಧನೆಯನ್ನೇ ಸಾಧಿಸಲು ಹೊರಟರು. ಭಾರತದಲ್ಲಿದ್ದ ಅತುಲ ಸಂಪತ್ತುಗಳನ್ನು ಸ್ವದೇಶಕ್ಕೆ ಸಾಗಿಸಿ, ಭಾರತವನ್ನು ಬರಡು ಭೂಮಿಯನ್ನಾಗಿ ಮಾಡುವುದೇ ಆಂಗ್ಲರ ಧ್ಯೇಯವಾಗಿದ್ದಿತು. ಆಂಗ್ಲರು ಎಷ್ಟೆಷ್ಟೋ ವೀರ ಭಾರತೀಯರ ಹುಟ್ಟನ್ನಡಗಿಸಿ ತಮ್ಮ ಕೀರ್ತಿ ಧ್ವಜವನ್ನೇ ಎತ್ತಿದರು. ಭಾರತೀಯರನ್ನು ಜೀತದಾಳುಗಳನ್ನಾಗಿ ಕಾರಕೂನರಾಗಿ ದುಡಿಯಿಸಿ, ಭೋಗಭಾಗ್ಯಗಳನ್ನು ಆಂಗ್ಲರೇ ಪಡೆದರು. "ತನ್ನ ನುಡಿಯೇ ವೇದವಾಕ್ಯ. ತಾನು ವಿಧಿಸಿದ ದಂಡನೆಗೆ ಎಲ್ಲರೂ ಗುರಿಯಾಗಲೇ ಬೇಕು. ಸಣ್ಣ ತಪ್ಪಿಗೂ ಉಗ್ರ ಶಿಕ್ಷೆ"ಯನ್ನಿತ್ತು ಭಾರತೀಯರ ಪವಿತ್ರ ಆತ್ಮಗಳನ್ನು ಬಲಿಧಾನವಾಗಿ ಪಡೆದ ಆಂಗ್ಲರು ನಮ್ಮ ಹಿತವರೇ? ದಾಸ್ಯ ಶೃಂಖಲೆಯಲ್ಲಿ ತೊಳಲಾಡುತ್ತಿರುವ ಭಾರತ ಮಾತೆಯನ್ನು ಬನ್ನ ವಿಮೋಚನೆಗೊಳಿಸಲಿಕ್ಕಾಗಿ ಅದೆಷ್ಟೋ ವೀರ ಪುರುಷರು ಅಲ್ಲದೆ ವೀರ ರಮಣಿಯರು ಕೂಡಾ ಹೋರಾಡಿ ತಮ್ಮ ಪವಿತ್ರಾತ್ಮಗಳನ್ನು ದೇಶಮಾತೆಗಾಗಿ ಅರ್ಪಿಸಿರುವರು. ನಾಡಬೇಡಿಯನ್ನು ಕಡಿದೊಗೆದು ಬಿಡುಗಡೆಯ ಸ್ವರ್ಗಸುಖಕ್ಕಾಗಿ ಹೋರಾಡಿ ವೀರ ಸ್ವರ್ಗವನ್ನು ಪಡೆದ ನಾರೀಮಣಿಯರಲ್ಲಿ ಕನ್ನಡಿಗಳಾದ ಕಿತ್ತೂರ ಚೆನ್ನಮ್ಮಳೇ ಪ್ರಥಮಳು—ಎಂದು ಹೇಳುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರವಲ್ಲವೇ?

ಕಿತ್ತೂರು ಇಂದು ಹಾಳು ಬಿದ್ದಿದೆ. ಆದರೆ ಒಂದು ಸಮಯದಲ್ಲಿ ಅದು ಕೀರ್ತಿಯ ಉತ್ತುಂಗ ಶಿಖರವನ್ನೇರಿದೆ ಎಂಬುದು ನಿಜ. ಮಾಂಡಲೀಕ ತನಕ್ಕೊಪ್ಪದ ಮಲ್ಲಸರ್ಜನನನ್ನು "ಮೈಸೂರಿನ ಹುಲಿ"ಯೆನ್ನಿಸಿದ ಟೀಪು ಸುಲ್ತಾನನು ಸೆರೆಹಿಡಿದು ಬಂಧಿಯಾಗಿರಿಸುವನು. ಉಪಾಯದಿಂದ ಮಲ್ಲಸರ್ಜನ ಮಡದಿಯಾದ ರುದ್ರಾಂಬೆಯು ತನ್ನ ಪತಿಯನ್ನು ಬಂಧನ ವಿಮುಕ್ತನನ್ನಾಗಿ ಮಾಡಿದಳು.

ಟೀಪುವಿನ ಸೇನಾಬಲಕ್ಕೆ ಹೆದರಿದ ಮಲ್ಲಸರ್ಜನು ಕಾಗತಿ ಧೂಳಪ್ಪ ದೇಸಾಯಿಯವರಲ್ಲಿ ಸಹಾಯ ಕೋರುವನು. ಆಗ ಮಲ್ಲಸರ್ಜನು ದೇಸಾಯಿಯ ಮಗಳಾದ ಚೆನ್ನಮ್ಮಳಲ್ಲಿ ಅನುರಕ್ತನಾಗುವನು. ಮಹಾಸಾಧ್ವಿ ಶಿರೋಮಣಿಯಾದ ರುದ್ರಾಂಬೆಯು ತನ್ನ ಪತಿಯ ಮದುವೆ ಚೆನ್ನಮ್ಮಳೊಂದಿಗಾಗುವುದಕ್ಕೆ ಒಪ್ಪುವಳು. ಆದುದರಿಂದ ಚೆನ್ನಮ್ಮಳು ಕಿತ್ತೂರ ರಾಣಿಯಾಗುವಳು.

ಮಲ್ಲಸರ್ಜನು ಬೆಳಗಾವಿ ಜಿಲ್ಲೆಯ ಒಂದು ಚಿಕ್ಕ ಸಂಸ್ಥಾನವಾದ ಕಿತ್ತೂರು ಪಟ್ಟಣವನ್ನಾಳುತ್ತಿದ್ದನು. ಈತನು ಪ್ರಜೆಗಳ ಹಿತಕ್ಕಾಗಿ ಕೆರೆ, ಬಾವಿ, ಕಾಲುವೆ, ರಸ್ತೆಗಳನ್ನು ಮಾಡಿಸಿದನು. ೧೮೨೪ರಲ್ಲಿ ಮಲ್ಲಸರ್ಜನು ಕಾಲವಾದನು. ಮಲ್ಲಸರ್ಜನ ಹಿರೇ ರಾಣಿಯ ಮಗನಾದ ಶಿವಲಿಂಗ ಸರ್ಜನು ಪಟ್ಟವನ್ನೇರಿದನು.

ಚೆನ್ನಮ್ಮಳಿಗೆ ಶಿವಲಿಂಗನೆಂದರೆ ತುಂಬಾ ಮಮತೆ. ಕಿರುಪ್ರಾಯದಲ್ಲಿ ಖಡ್ಗ ಬೀಸುವುದು, ಗುರಾಣಿ ಹಿಡಿಯುವುದು, ಕುದುರೆ ಸವಾರಿ ಮೊದಲಾದ ರಾಜಯೋಗ ಯುದ್ಧವಿದ್ಯೆಗಳನ್ನು ಚೆನ್ನಮ್ಮಳೇ ಶಿವಲಿಂಗನಿಗೆ ಕಲಿಸಿಕೊಟ್ಟಳು. ಶಿವಲಿಂಗ ಸರ್ಜನ ಮದುವೆ ಅವನ ನೆಚ್ಚಿನವಳಾದ ಶಿವನಗುತ್ತಿ ದೇಸಾಯಿಯವರ ಮಗಳು ವೀರಾಂಬೆಯೊಂದಿಗಾಯಿತು.

ಅರಮನೆಯ ಕಾರಬಾರಿಗಳಾದ ಮಲ್ಲಪ್ಪ ಶೆಟ್ಟಿ ಮತ್ತು ವೆಂಕಟ್ರಾಯರು ತಮ್ಮ ಅಭಿವೃದಿಗಾಗಿ ಇಂಗ್ಲೀಷರೊಂದಿಗೆ ಸೇರಿದರು. ಇವರಿಂದ ಸಬಲ ಆಂಗ್ಲರಿಗೆ ಪ್ರಬಲ ಶಕ್ತಿಯೇ ದೊರೆಯಿತೆನ್ನಬೇಕು.

ಮಲ್ಲಸರ್ಜನು ಪೇಶ್ವೆಯವರ ಮೋಸವಂಚನೆಗಳಿಗೆ ಸಿಲುಕಿ ಮಡಿದನೆಂದು ತಿಳಿದ ಶಿವಲಿಂಗನು ಪೇಶ್ವೆಯವರ ಸರ್ವನಾಶಕ್ಕಾಗಿ ಇಂಗ್ಲೀಷರಿಗೆ ಸಹಕರಿಸಲು ಒಪ್ಪಿದನು. ಇದಕ್ಕಾಗಿ ಕಿತ್ತೂರಿನಿಂದ ಇಂಗ್ಲೀಷರಿಗೆ ಕಪ್ಪ ಕಾಣಿಕೆಗಳನ್ನು ಕೊಡಬೇಕೆಂದಾಯ್ತು. ಪೇಶ್ವೆಯವರ ಮೇಲಿನ ಸೇಡನ್ನು ತೀರಿಸಲಿಕ್ಕಾಗಿ ವಿದೇಶಿಯರಾದ ಆಂಗ್ಲರ ಸಹಾಯಕೋರಿದುದರಿಂದ

(8ನೇ ಪುಟಕ್ಕೆ ಮುಂದುವರಿದಿದೆ)

## ವಸುಧೈವ ಕುಟುಂಬಕಮ್

(6ನೇ ಪುಟದಿಂದ ಮುಂದುವರಿದುದು)

ಪ್ರೇರಿತರಾಗಿ ಯುದ್ಧಕ್ಕೆ ಆಹ್ವಾನವಿತ್ತಲ್ಲಿ ವಿಶ್ವಕದನಕ್ಕೆ ಆಮಂತ್ರಣ ಕೊಟ್ಟಂತಾಗಬಹುದು. ಉಭಯ ರಾಷ್ಟ್ರಗಳೊಳಗೆ ಈಗಾಗಲೇ ತಲೆದೋರಿರುವ ಬಿಕ್ಕಟ್ಟು ಉಲ್ಬಣಗೊಳ್ಳದಂತೆ ಅದಕ್ಕೆ ಅವಕಾಶವೀಯಬಾರದೆಂಬುದೇ ಭಾರತದ ಶಾಂತಿಯುತ ಸಹ ಬಾಳ್ವೆಯ ಧೋರಣೆಯೆಂದು ಪ್ರಧಾನ ಮಂತ್ರಿ ನೆಹರುಗಳು ಆಗಾಗ ಹೇಳುತ್ತಿರುವರು.

ಸ್ವಾತಂತ್ರ್ಯೋತ್ತರದ ಈ ಗತವರ್ಷಗಳಲ್ಲಿ ಭಾರತೀಯರು ಸಾಗಿಸುತ್ತಿರುವ ಜೀವನವನ್ನು ಪರಾಂಬರಿಸಿದರೆ ಭಾರತದ ಆಡಳಿತದ ಮಟ್ಟಿಗೆ ಸ್ವಾತಂತ್ರ್ಯಬಂದರೂ ಭಾರತೀಯರ ಜೀವನ ಸ್ವತಂತ್ರವಾಗಿಲ್ಲವೆಂದು ಸ್ಪಷ್ಟವಾಗಿ ಕಂಡುಬಾರದಿರದು. ಎಲ್ಲಿ ನೋಡಿದರೂ ಇಂದು ಅಧಿಕಾರಲಾಲಸೆ, ಧನಪಿಪಾಸೆಗಳಿಂದಲಾಗಿ ಎಷ್ಟೋ ಅನ್ಯಾಯಗಳು ನಡೆದು ನ್ಯಾಯನಿಷ್ಠ ಪ್ರಜೆಯು ಜೀವಿಸುವುದು ಕಷ್ಟವಾಗಿದೆ. ನಮ್ಮ ಅಧಿಕಾರಿಗಳು, ಅವರು ಮಾಡುವ ಕಾನೂನುಗಳು ಜನರಲ್ಲಿ ಪರಸ್ಪರ ದ್ವೇಷಮಾತ್ಸರ್ಯಗಳನ್ನು ಹುಟ್ಟಿಸುವಂತೆಸಗಿ ಪರಸ್ಪರ ಪ್ರೀತಿವಿಶ್ವಾಸಗಳಿಗೆಡೆಯಿಲ್ಲದಾಗಿದೆ. ಪೂಜ್ಯ ಗಾಂಧೀಜಿಯವರು ಶಾಂತಿಯುತ ಸಹಜೀವನದ ದಾರಿ ತೋರಿಕೊಟ್ಟ ಈ ಸ್ವತಂತ್ರಭಾರತವಿಂದು ಅಶಾಂತಿಯ ವಿಕ್ಷುಬ್ಧ ಜೀವನದತ್ತ ಸಾಗುತ್ತಿರುವುದನ್ನು ಕಾಣುವಾಗ ನಿರಾಶೆ ಹುಟ್ಟುತ್ತಿದೆ. ಇದಕ್ಕೇನಾದರೂ ಪರಿಹಾರವಿದೆಯೇ? ಇದೆ "ವಸುಧೈವ ಕುಟುಂಬಕಮ್" ಎಂಬಂತೆ ವಿಶಾಲ ಭಾವನೆಯಿಂದ ತಾನೂ ಬದುಕಬೇಕು, ಜಗತ್ತೂ ಬಾಳಬೇಕು ಎಂದು ತಿಳಿದು ಬಾಳುವುದೇ ಶಾಂತಿಯುತ ಸಹಜೀವನದ ಮೂಲಮಂತ್ರವಾಗಿರುವುದು!

**"ಸಹ ನಾ ವವತು, ಸಹನೌ ಭುನಕ್ತು"**
**ಸಹ ವೀರ್ಯ ಕರವಾವ ಹೈ**
**ತೇಜಸ್ವಿ ನಾವಧೀತಮಸ್ತು ಮಾ**
**ವಿದ್ವಿಷಾವಹೈ**
**ಓಂ ಶಾಂತಿಃ ಶಾಂತಿಃ ಶಾಂತಿಃ!**

## ಅಗೋಸ್ತು 15

### ಅಪೂರ್ವ ಘಟನೆಗಳ ದಿನ

1947ರ ಅಗೋಸ್ತು 15ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ಈ ದಿನವು ಭಾರತ ಮಾತೆಯ ಪುಣ್ಯದಿನ. ಪ್ರತಿವರ್ಷ ಅಗೋಸ್ತು 15ರಂದು ನಾವು ವಿಜ್ರಂಭಣೆಯಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ ಮಾಡುತ್ತೇವೆ.

× × ×

ಸಾಹಸಿ ಅನ್ವೇಷಕ ಕ್ರಿಸ್ಟೊಫರ್ ಕೊಲಂಬಸನು 1498 ಅಗೋಸ್ತು 15ರಂದೇ ಗ್ರೆನಿಡಾವನ್ನು ಶೋಧಿಸಿದನು.

× × ×

ಶ್ರೇಷ್ಠ ಕವಿ ಹಾಗೂ ಕಾದಂಬರಿಕಾರ ಸರ್ ವಾಲ್ಟರ್ ಸ್ಕೋಟನು ಜನ್ಮವೆತ್ತಿದ ದಿನ ಅಗೋಸ್ತು 15, 1771.

× × ×

ಪಾಂಟೋ ಪ್ರಾಕ್ಟನ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಗುಪ್ತ ಮತಧಾನ ಚೀಟು ಪ್ರಥಮ ಉಪಯೋಗವಾದುದು. 1872ರ ಇದೇ ದಿನದಂದು.

× × ×

ಅರೇಬಿಯದ ಟಿ. ಇ. ಲಾರೆನ್ಸರು ಜನ್ಮವೆತ್ತಿದ್ದು ಅಗೋಸ್ತು 15 1888ರಲ್ಲಿ.

× × ×

ಈಗಿನ ಇಂಗ್ಲೆಂಡಿನ ರಾಣಿ ಎಲಿಜಬೆತರ ಕುವರಿ ಆನ್ನೆ, 1950 ಅಗೋಸ್ತು 15ರಂದು ಜನನಕ್ಕೆ ಬಂದಳು.

× × ×

ಮಹರ್ಷಿ ಅರವಿಂದ ಘೋಷರ ಪುಣ್ಯ ಹೆಸರನ್ನರಿಯದ ಭಾರತೀಯರಿಲ್ಲ. ಇವರು ಜನ್ಮವೆತ್ತಿದ ಪುಣ್ಯದಿನ 1872, ಅಗೋಸ್ತು 15.

ಸಂಗ್ರಾಹಕ: **ಉಮೇಶ್ ರಾವ್, ಯೆಕ್ಕಾರು.**

## ವೀರರಾಣಿ ಕಿತ್ತೂರ ಚೆನ್ನಮ್ಮ

(7ನೇ ಪುಟದಿಂದ ಮುಂದುವರಿದುದು)

ಚೆನ್ನಮ್ಮಳಿಗೆ ಹೆಚ್ಚಿನ ಹೃದಯಘಾತವಾಯಿತು. "ತನ್ನ ಮಗನು ಪರಕೀಯರಾದ ಆಂಗ್ಲರ ಮಾತಿನಂತೆ ನಡೆದು ಕುಲಕ್ಕೆ ಅಪಕೀರ್ತಿ ತರುವುದು ಹಿತವಲ್ಲ. ಅದರಲ್ಲೂ ಮಾತೆಗಿಂತಲೂ ಅಧಿಕ ಪ್ರೇಮದಲ್ಲಿ ಸಾಕಿ ಸಕಲ ವಿದ್ಯೆಗಳನ್ನು ಕಲಿಸಿದ ಚೆನ್ನಮ್ಮಳನ್ನು ಕಡೆಗಣಿಸಿದುದು"—ಮಾತೆಯಾದ ರುದ್ರವ್ವಳಿಗೆ ಮಹಾ ದುಃಖವನ್ನು ತಂದೊಡ್ಡಿತು. ಇದೇ ಚಿಂತೆಯಲ್ಲಿ ರುದ್ರಾಂಭೆ ಇಹಲೋಕ ತ್ಯಜಿಸಿದಳು.

ಕಿತ್ತೂರು ಬ್ರಿಟಿಷರ ಮೇಲ್ವಿಚಾರಣೆಗೆ ಒಳಗಾಯಿತು. ಶಿವಲಿಂಗ ಸರ್ಜನು ಕ್ಷಯರೋಗಕ್ಕೆ ತುತ್ತಾಗಿ ಕಾಲವಾದನು. ಶಿವಲಿಂಗನಿಗೆ ಮಕ್ಕಳಿಲ್ಲದ ಕಾರಣ, ಆತನು ತನ್ನ ಸಮೀಪದ ಬಂಧುವಾದ ಚಂದಾಸಾಹೇಬನನ್ನು ದತ್ತಪುತ್ರನನ್ನಾಗಿ ಪಡೆದಿದ್ದನು. ರಾಜ್ಯದ ಆಡಳಿತೆ ಚೆನ್ನಮ್ಮಳೇ ವಹಿಸಿಕೊಳ್ಳಬೇಕಾಯಿತು. (ಸಪ್ಟಂಬರ ೧೨, ೧೮೨೪ರಲ್ಲಿ ಶಿವಲಿಂಗ ರುದ್ರ ಸರ್ಜನು ಕಾಲವಾದನು.)

ಆದರೆ ದತ್ತ ಸ್ವೀಕಾರ ಶಿವಲಿಂಗ ಸರ್ಜನು ಮಾಡಿಸಿಕೊಳ್ಳಲಿಲ್ಲ. ಅವನ ಮರಣಾನಂತರ ಚೆನ್ನಮ್ಮಳೇ ದತ್ತಸ್ವೀಕಾರ ಮಾಡಿಸಿಕೊಂಡುದು. ಇದು ಇಂಗ್ಲೀಷರ ವಿರುದ್ಧ ಅನ್ಯಾಯವೆಂದು ಆಂಗ್ಲರು ಕುಪಿತರಾದರು. ಈ ಸುದ್ದಿಯು ದಾರವಾಡದಲ್ಲಿ ಬ್ರಿಟಿಷರ ಪ್ರತಿನಿಧಿಯಾಗಿದ್ದ ಥ್ಯಾಕರೆಗೂ ತಿಳಿಯಿತು.

೧೮೨೪ ಸಪ್ಟಂಬರ ೨೩ರಂದು ಆಂಗ್ಲಸೇನೆಯು ಬಂದು ಕಿತ್ತೂರು ಕೋಟೆಯ ಮುಂದೆ ಬೀಡುಬಿಟ್ಟಿತು. ಚೆನ್ನಮ್ಮಳೂ ಯುದ್ಧಸನ್ನದ್ಧಳಾಗಿರುವಳೆಂಬ ರಹಸ್ಯವನ್ನು ಸ್ವಾಮಿದ್ರೋಹಿಯೂ ತಿಳಿಗೇಡಿಯೂ ಆದ ಮಲ್ಲಪ್ಪ ಶೆಟ್ಟಿಯು ಥ್ಯಾಕರೆಗೆ ಮೊದಲೇ ಹೇಳಿದ್ದನು. ಕಿತ್ತೂರ ಚೆನ್ನಮ್ಮಳು ಧೀರತನದಿಂದ ತನ್ನ ಸೇನೆಯನ್ನು ಹುರಿದುಂಬಿಸಿದಳು. ಕಿತ್ತೂರ ಚೆನ್ನಮ್ಮಳು ರಣಚಂಡಿಯಾದಳು. ತನ್ನ ಸೇನೆಯ ಅಧಿಪತಿತ್ವವನ್ನು ಗುರುಸಿದ್ದಪ್ಪನಿಗೆ ಕೊಟ್ಟಳು. ತಾನು ಕೋಟೆಯ ಮೇಲೆ ನಿಂತು ವೈರಿಗಳ ಸಮಕ್ಷಮ ಯುದ್ಧಮಾಡಿದಳು. ಕದನ ಕೋಲಾಹಲದ ಮಹಾಕಾಳಿಯಾದಳು. ರಕ್ತದೋಕುಳಿ ಹರಿಯಿತು. ಸಹಸ್ರಾರು ಜೀವಗಳು ಆಹುತಿಯಾದುವು. ಶಾಕಿನಿ ಡಾಕಿನಿಗಳು ಈ ಮುದ್ದೆ ರಕ್ತಮಾಂಸಗಳನ್ನು ತಿಂದು ತೇಗಿದುವು. ಹೆಚ್ಚಿನ ಬ್ರಿಟಿಷ್ ಸೇನಾನಿಗಳು ಅಳಿದರು. ಥ್ಯಾಕರೆ ಸಾಹೇಬನೂ ಅರೆಗಳಿಗೆಯೊಳಗೆ ಮಡಿದುಬಿದ್ದನು. ಥ್ಯಾಕರೆ ಮಡಿದಕೂಡಲೇ ಬ್ರಿಟಿಷ್ ಸೇನೆಯು ಚಲ್ಲಾಪಿಲ್ಲಿಯಾಗಿ ಚದರಿಹೋಯಿತು. ಥ್ಯಾಕರೆಯ ಸರದಾರನನ್ನು ಚೆನ್ನಮ್ಮಳು ಬಂಧಿಸಿದಳು. ಜಯಶ್ರೀಯು ಚೆನ್ನಮ್ಮಳ ವಶವಾದಳು.

ಆದರೆ ಚೆನ್ನಮ್ಮಳು ಬ್ರಿಟಿಷ್ ಬಂಧಿಗಳನ್ನು ಮತ್ತವರ ಮಕ್ಕಳನ್ನು ಅತಿ ಮಮತೆಯಿಂದ ನೋಡಿಕೊಂಡಳು. ಇವರೇ ಮುಂದಕ್ಕೆ ಬ್ರಿಟಿಷರು ಚೆನ್ನಮ್ಮಳನ್ನು ಸೆರೆಯಲ್ಲಿಟ್ಟಾಗ ಅವಳನ್ನು ಬಂಧನ ವಿಮೋಚನೆಯನ್ನಾಗಿ ಮಾಡಿಕೊಡಬೇಕೆಂದು ವಿನಂತಿಸಿದ್ದರು.

ಥ್ಯಾಕರೆಯ ಮರಣ ಹಾಗೂ ಸೋಲಿನ ವಿಷಯ ಬೊಂಬಾಯಿಯಲ್ಲಿದ್ದ ಬ್ರಿಟಿಷ್ ಅಧಿಕಾರಿ ಚಾಪ್ಲಿನರಿಗೆ ತಿಳಿಯಿತು. ಇದರಿಂದಾಗಿ ಚಾಪ್ಲಿನನು ರೌದ್ರಾವೇಷಗೊಂಡರು. ನವಂಬರ ೩೦, ೧೮೨೪ರಲ್ಲಿ ದೊಡ್ಡ ಬ್ರಿಟಿಷ್ ಸೈನ್ಯವು ಬಂದು ಕಿತ್ತೂರನ್ನು ಹೊಕ್ಕಿತ್ತು. ಚೆನ್ನಮ್ಮಳೂ ತನ್ನ ಸೈನ್ಯವನ್ನು ಸಜ್ಜಾಗಿ ಮಾಡಿದ್ದಳು. ಇಕ್ಕಡೆಗಳಲ್ಲೂ ಮಹಾಸೈನ್ಯವಿದ್ದಿತು. ಯುದ್ಧವು ಗಂಭೀರವಾಗಿಯೇ ಪರಿಣಮಿಸಿತು. ಆದರೆ ಕೆಲವು ಹೊಣೆಗೇಡಿಗಳು ಆಂಗ್ಲರಿಗೆ ಚೆನ್ನಮ್ಮಳ ಸೈನ್ಯದ ಎಲ್ಲಾ ವಿಚಾರಗಳನ್ನು ತಿಳಿಸಿದ್ದರು. ಇದರಿಂದಾಗಿ ಚೆನ್ನಮ್ಮಳ ಪಡೆಯು ವೀರತ್ವದಿಂದಾಗಿ ಹೋರಾಡಿದರೂ ಜಯ ಲಭಿಸಲಿಲ್ಲ, ಕಿತ್ತೂರು ಕೋಟೆಯು ಬ್ರಿಟಿಷರ ವಶವಾಯಿತು. ತನ್ನ ಕೋಟೆಯು ಆಂಗ್ಲರ ವಶವಾದರೂ ವೀರೆಯಾದ ಚೆನ್ನಮ್ಮಳು ಕಂಗೆಡಲಿಲ್ಲ, ಬ್ರಿಟಿಷರಿಗೆ ಶರಣಾಗತಳಾಗಲಿಲ್ಲ. ಭಾರತದ ವೀರನಾರಿಯು ಶರಣಾಗತಿಯಂತಹ ಹೇಡಿಗೆಲಸಕ್ಕೆ ಎಂದೂ ಮನಮಾಡಲಾರಳು. ನರನಾಡಿಗಳಲ್ಲಿ ವೀರತ್ವದ ರಕ್ತವು ಹರಿಯುತ್ತಿದ್ದಿತು. ತನ್ನ ದೇಶಕ್ಕಾಗಿ, ಉದ್ಧಾರಕ್ಕಾಗಿ ತನ್ನ ದೇಹವನ್ನೇ ಕೊಡಲು ಚೆನ್ನಮ್ಮಳು ಹಿಂಜರಿಯುವವಳಲ್ಲ.

ಕೋಟೆಯು ಬ್ರಿಟಿಷರ ವಶವಾದೊಡನೆ ಚೆನ್ನಮ್ಮಳು ತನ್ನ ಆಪ್ತನಾದ ರಾಯಣ್ಣನ ಆಶ್ರಯವನ್ನು ಪಡೆಯಲು ಸಾಂಗ್ಲಿಗೆ ನಡೆದಳು. ಬ್ರಿಟಿಷ್ ಸೇನೆಯು ಚೆನ್ನಮ್ಮಳನ್ನು ಬಂಧಿಸಿತು. ಕಾರಾಗ್ರಹದ ಕಡುಬೇನೆಯನ್ನು ರಾಣಿಯು ಅನುಭವಿಸಿದಳು. ಚೆನ್ನಮ್ಮಳೂ ಧಾರವಾಡದ ಬೈಲಹೊಂಗಳದ ಕೋಟೆಯಲ್ಲಿಯೇ ಫೆಬ್ರವರಿ ೨, ೧೮೨೯ರಲ್ಲಿ ತೀರಿದಳು. ಇಂತಹ ಸ್ತ್ರೀರತ್ನವನ್ನು ಪಡೆದ ಭಾರತ ಜನನಿಯು ಸದಾ ಧನ್ಯಳು.

(ಸಾಧಾರ)

॥ ಜಯ್ ಹಿಂದ್ ॥